# ಮಹಿಳಾ ವಿಶೇಷ

MAHILA VISHESHA

**ಕನ್ನಡ ತಿಂಗಳ ಪತ್ರಿಕೆ** **ಸೆಪ್ಟೆಂಬರ್ 1-30 2017**

KANNADA MONTHLY SEPTEMBER1-30 2017

ಸಂಪುಟ 3, ಸಂಚಿಕೆ 1 ಪುಟ : 24, ಬೆಲೆ : ರೂ. 10–00

Vol. 3, Issue 1, Pages: 24, Price : Rs. 10-00


ಸಂಪಾದಕರು: **ಹೆಚ್.ವಿ. ವೆಂಕಟಸುಬ್ಬರಾವ್** ಮೊಬೈಲ್ 88803–34444



## ಒಳಪುಟಗಳಲ್ಲಿ...


| | |
|---|---|
| ದೇವರಮನೆ ಏಕೆ ಇರುತ್ತದೆ? | Pg. No. 4 |
| ಚಂದದ ಚಂದೇರಿ ಸೀರೆ | Pg. No. 6 |
| ಸ್ವರ್ಗದ ಹಣ್ಣು ಬಾಳೆಹಣ್ಣು | Pg. No. 10 |
| ಭೂಲೋಕದಲ್ಲಿ ಕಾಮಧೇನು | Pg. No. 14 |
| ಬಿಲ್ವ ಮಹಾತ್ಮೆ | Pg. No. 18 |


**ನಾಡಿನ ಜನತೆಗೆ ಬಕ್ರಿದ್, ತಿರುಓಣಂ, ಶಿಕ್ಷಕರ ದಿನಾಚರಣೆ, ಇಂಜಿನಿಯರ್ಸ್ ದಿನಾಚರಣೆ, ಆಯುಧಪೂಜೆ ಹಾಗೂ ವಿಜಯದಶಮಿ ಹಬ್ಬದ ಪ್ರಯುಕ್ತ ಶುಭಾಶಯಗಳು**



## 21 ಪತ್ರೆಗಳ ಮಾಹಿತಿ



ಗಣೇಶನ ಪೂಜೆಯನ್ನು ಮಾಡುವಾಗ ಅರ್ಚನೆಯಲ್ಲಿ 21 ಬಗೆಯ ಪತ್ರೆ ಅಥವಾ ಎಲೆಗಳ ವಿಧ್ಯುಕ್ತ ಪಾತ್ರವಿದೆ. ಇವು ಔಷಧೀಯ ಗುಣಗಳಿಂದಲೂ ಕೂಡಿದ್ದು, ಆಯುರ್ವೇದದಂಥ ಪ್ರಾಚೀನ ವೈದ್ಯಪದ್ಧತಿಯಲ್ಲಿ ಇಂದಿಗೂ ಪರಿಣಾಮಕಾರಿಯಾಗಿ ಬಳಕೆಯಾಗುತ್ತಿವೆ. ವೇದ-ಪುರಾಣ-ಜಾನಪದ ಕಥನ ರಾಶಿಯಲ್ಲಿ ಇವುಗಳ ಉಲ್ಲೇಖಗಳು ಹೇರಳವಾಗಿವೆ.

### 2. ದೇವದಾರು

ಸಂಸ್ಕೃತ: ದೇವದಾರು

ಇಂಗ್ಲಿಷ್: ಹಿಮಾಲಯನ್ ಸಿಡರ್

ವೈಜ್ಞಾನಿಕ ಹೆಸರು: Cedrus Deodara

ಇದು ಹೆಚ್ಚಾಗಿ ಹಿಮಾಲಯದಲ್ಲಿ ಕಂಡುಬರುತ್ತದೆ. ಭಾರತದೆಲ್ಲೆಡೆ ಇದನ್ನು ಅಲಂಕಾರಿಕ ವೃಕ್ಷವಾಗಿ ಬೆಳೆಯಲಾಗುತ್ತದೆ. ಪರಾಶರ ಗೃಹ್ಯಸೂತ್ರಗಳಲ್ಲಿ ಮತ್ತು ಕೌಶಿಕ ಸೂತ್ರಗಳಲ್ಲಿ ದೇವದಾರುವಿನ ಉಲ್ಲೇಖವಿದೆ. ಪಾಣಿನಿಯೂ ದೇವದಾರು ವನದ ಬಗ್ಗೆ ಬರೆದಿದ್ದಾನೆ. ಭಾವಮಿಶ್ರ ಇದನ್ನು ಕರ್ಪೂರಾದಿ ವರ್ಗದಲ್ಲಿ ಸೇರಿಸಿದ್ದಾನೆ.

**ಉಪಯುಕ್ತ ಭಾಗಗಳು:** ಕಾಂಡ, ತೊಗಟೆ, ಎಲೆ, ತೈಲ.

**ರಾಸಾಯನಿಕ ಘಟಕಗಳು:** ಚಂಚಲ ತೈಲ, ಪಿ-ಮಿಥೈಲ್ ಅಸಿಟೋಫಿನೋನ್, ಅಟ್ಲಾಂಟೋನ್, ಡಿಯೋಡರೀನ್, ಟಾಕ್ಸಿಫೋಲೀನ್.

**ಔಷಧೀಯ ಗುಣಗಳು**

★ ಕೆಮ್ಮು ಇರುವಾಗ ದೇವದಾರು ತೈಲವನ್ನುತ್ರಿಕಟು (ಶುಂಠಿ, ಹಿಪ್ಪಲಿ, ಮೆಣಸು) ಪುಡಿಯೊಂದಿಗೆ ಬೆರೆಸಿ ಸೇವಿಸಬೇಕು.

★ ದೇಹದಲ್ಲಿ ಊತವಿದ್ದರೆ ದೇವದಾರು ಮತ್ತು ಶುಂಠಿಪುಡಿಯನ್ನು ಗೋಮೂತ್ರದಲ್ಲಿ ಅರೆದು ಲೇಪಿಸಬೇಕು.

★ ಗಾಯ ಮತ್ತು ಹುಣ್ಣುಗಳಾಗಿದ್ದರೆ ದೇವದಾರು ತೊಗಟೆಯ ಪುಡಿಯನ್ನು ಇಲ್ಲವೇ ದೇವದಾರು ತೈಲವನ್ನು ಲೇಪಿಸಬಹುದು.

★ ಜ್ವರವಿರುವಾಗ ತೊಗಟೆಯ ಕಷಾಯ ಸೇವನೆ ಒಳ್ಳೆಯದು.

★ ಹೊಟ್ಟೆನೋವಿದ್ದರೆ ದೇವದಾರು ತೊಗಟೆಯ ಪುಡಿಯನ್ನು ಜೇನುತುಪ್ಪದೊಂದಿಗೆ ಬೆರೆಸಿ ಸೇವಿಸಬೇಕು.

★ ಪಾರ್ಶ್ವವಾಯು ಮತ್ತು ಮೂತ್ರಕೋಶದಲ್ಲಿ ಕಲ್ಲುಗಳಿದ್ದಲ್ಲಿ ದೇವದಾರು ಕಷಾಯ ತಯಾರಿಸಿ ಸೇವನೆ ಉತ್ತಮ.

*(ಸಂಗ್ರಹ: ಶ್ರೀಕಂಠಶರ್ಮ)*

## ನನ್ನ ಮಾತು



ಈ ಸಂಚಿಕೆಯಿಂದ ತಿಂಗಳ ಪತ್ರಿಕೆಯು ಮೂರನೇ ವರ್ಷಕ್ಕೆ ಕಾಲಿಡುತ್ತಿರುವುದಕ್ಕೆ ಓದುಗರೆಲ್ಲ ರಿಗೂ ಧನ್ಯವಾದಗಳು. ನಿಮ್ಮ ಸಹಕಾರ ಇನ್ನು ಮುಂದೆಯೂ ಚಂದಾದಾರರಾಗುವ ಮೂಲಕ ನೀಡಬೇಕೆಂದು ವಿನಂತಿಸಿಕೊಳ್ಳಲಾಗಿದೆ.

ಬೆಂಗಳೂರಿನಲ್ಲಿ ಇಂದಿರಾ ಕ್ಯಾಂಟೀನ್ ಆರಂಭಿಸಿರುವುದು ಸಂತಸದ ವಿಚಾರ. ಇಂದಿರಾ ಕ್ಯಾಂಟೀನ್ ಆರಂಭಿಸಿರುವ ಧ್ಯೇಯ ಉದ್ದೇಶಗಳು ಯಾವುದೇ ಲೋಪ ದೋಷವಿಲ್ಲದೆ ಕಾರ್ಯ ನಿರ್ವಹಿಸಲಿ. ರಾಜ್ಯದ ಇತರೆ ನಗರ ಪ್ರದೇಶಗಳಲ್ಲೂ ಸಹ ಇಂದಿರಾ ಕ್ಯಾಂಟೀನ್ ಆರಂಭಗೊಂಡು ಸಾಮಾನ್ಯ ಜನರಿಗೆ ಸಹಕಾರವಾಗಲಿ.

10,000 ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಗಾಗಿ ಸರ್ಕಾರ ಆದೇಶ ಹೊರಡಿಸಿ ಅರ್ಜಿಯನ್ನು ಆಹ್ವಾನಿಸಿರುವುದು ಒಳ್ಳೆಯದು. ಆದರೆ ಅರ್ಜಿ ಸಲ್ಲಿಸಲು ಕೆಲವು ಸಮಸ್ಯೆಗಳಿದ್ದು, ಅಭ್ಯರ್ಥಿಗಳು ತರಬೇತಿ ಹೊಂದಿದ್ದರೂ ಹೊರಗುಳಿಯುವಂತಾಗಿದೆ. ಉದಾಹರಣೆಗೆ, ಭಾಷಾ ಶಿಕ್ಷಕರಿಗೆ ಐಚ್ಛಿಕ ವಿಷಯ ಭಾಷೆ ಇದ್ದರೆ ಸಾಕು ಎಂದು ಪರಿಗಣಿಸಿದರೆ ಸಾವಿರಾರು ನಿರುದ್ಯೋಗಿ ಶಿಕ್ಷಕರಿಗೆ ಅನುಕೂಲವಾಗುತ್ತದೆ. ಸರ್ಕಾರ ಇದನ್ನು ಪರಿಶೀಲಿಸಿ ಈಗಲೇ ಸೂಕ್ತ ಕ್ರಮ ಜರುಗಿಸುವುದು ಒಳಿತು.

**ಸಂಪಾದಕ**

**ಹೆಚ್.ವಿ. ಸುಬ್ಬರಾವ್**

ನಿವೃತ್ತ ಸಾ.ಶಿ.ಇ. ನೌಕರ

**ಮಹಿಳಾ ವಿಶೇಷ**

MAHILA VISHESHA

**ಕನ್ನಡ ತಿಂಗಳ ಪತ್ರಿಕೆ**

**ಸೆಪ್ಟೆಂಬರ್, 1-30 2017**

KANNADA MONTHLY

SEPTEMBER 1-30, 2017

ಸಂಪುಟ 3, ಸಂಚಿಕೆ 1, ಪುಟ: 24

Price/ಬೆಲೆ : ರೂ. 10-00

Vol. 3, Issue 1, Pages: 24

ಮುಖಪುಟ:

**ಚಾಮುಂಡಿ ಬೆಟ್ಟದ ದೇವಸ್ಥಾನ**

ಗೌರವ ಸಂಪಾದಕರು:

**ಶ್ರೀಮತಿ ಸತ್ಯಭಾಮಾ ದಾಸ್**

**ಶ್ರೀಮತಿ ಗೀತಾ ರಾವ್**

ಸಂಪಾದಕರು:

**ಹೆಚ್.ವಿ. ವೆಂಕಟಸುಬ್ಬರಾವ್**

ಮೊಬೈಲ್ 88803-34444

ಉಪಸಂಪಾದಕರು:

**ಎಸ್.ವೆಂಕಟರವಣಪ್ಪ**

**ದ್ವಾರಕನಾಥ್**

ಕಛೇರಿ ವಿಳಾಸ:

ನಂ. 1, ಸೀತಾವಿಲಾಸ ಛತ್ರ,

ನಾರಾಯಣಶಾಸ್ತ್ರಿ ರಸ್ತೆ, ಕೆ.ಆರ್.

ಮೊಹಲ್ಲಾ, ಮೈಸೂರು-24.

E-mail: mahilavishesha@yahoo.com

mahilavishesha15@gmail.com

Web: www.mahilavishesha.in



# ದೇವರ ಮನೆ ಏಕೆ ಮನೆಯಲ್ಲಿರುತ್ತದೆ?




ಅನೇಕಾನೇಕ ಭಾರತೀಯ ಮನೆಗಳಲ್ಲಿ ಒಂದು ದೇವರ ಕೋಣೆಯನ್ನು ಅಥವಾ ಇದೇ ರೀತಿಯ ಒಂದು ಪವಿತ್ರ ವೇದಿಕೆಯನ್ನು ನಿರ್ಮಿಸಿರುತ್ತಾರೆ. ಪ್ರತಿ ದಿವಸ ದೀಪವನ್ನು ಹಚ್ಚಿ ಭಗವಂತನ ಆರಾಧನೆಯು ನಡೆಸಲ್ಪಡುತ್ತದೆ. ಆಧ್ಯಾತ್ಮದ ಸಾಧನೆಯ ವಿವಿಧ ಅನುಷ್ಠಾನಗಳಾದ ಜಪ, ಧ್ಯಾನ, ಪಾರಾಯಣ, ಪ್ರಾರ್ಥನೆ, ಭಜನೆ ಇತ್ಯಾದಿಗಳೆಲ್ಲವನ್ನೂ ಇಲ್ಲಿ ಮಾಡಲ್ಪಡುತ್ತದೆ. ಹುಟ್ಟುಹಬ್ಬದ ಆಚರಣೆ, ವಾರ್ಷಿಕೋತ್ಸವ, ಹಬ್ಬ ಹರಿದಿನ ಇತ್ಯಾದಿ ಶುಭಕಾರ್ಯಗಳಲ್ಲಿ ದೇವರಿಗೆ ವಿಶೇಷವಾಗಿ ಅರ್ಚನೆ, ಪೂಜೆಯನ್ನೂ ಇಲ್ಲಿ ಆಚರಿಸುತ್ತಾರೆ. ಮನೆಯಲ್ಲಿರುವ ಪ್ರತಿಯೊಬ್ಬ ಕುಟುಂಬದ ಸದಸ್ಯನೂ - ಹಿರಿಯನಾಗಿರಲಿ ಅಥವಾ ಕಿರಿಯನಾಗಿರಲಿ - ಇಂತಹ ಶುಭ ಸಮಾರಂಭಗಳಲ್ಲಿ ಭಾಗವಹಿಸಿ, ಎಲ್ಲರೂ ಒಟ್ಟಿಗೆ ಸೇರಿ, ಅವರ ಕುಲದೇವತೆಯನ್ನು ಇಲ್ಲಿ ವಂದಿಸುತ್ತಾರೆ.

**ದೇವರ ಕೋಣೆಯನ್ನು ಏತಕ್ಕಾಗಿ ನಿರ್ಮಿಸುತ್ತೇವೆ?**

ಪರಮಾತ್ಮನೆ ಈ ಸಮಸ್ತ ಸೃಷ್ಟಿಯ ಒಡೆಯನು. ಆದುದರಿಂದ, ನಾವು ವಾಸಿಸುವ ಮನೆಯ ವಾಸ್ತವಿಕ ಒಡೆಯನೂ ಆತನೇ ಆಗಿದ್ದಾನೆ. ದೇವರ ಕೋಣೆಯು, ಮನೆಯ ಪ್ರಮುಖ ಕೋಣೆಯಾಗಿರುತ್ತದೆ. ನಾವೆಲ್ಲರೂ, ಆತನ ಮನೆಯಲ್ಲಿ ತಾತ್ಕಾಲಿಕವಾಗಿ ವಾಸಿಸುತ್ತಿದ್ದೇವೆ. ಈ ಅಭಿಪ್ರಾಯವು ನಮ್ಮ ಹುಸಿ ಗರ್ವದಿಂದ ಮತ್ತು ಟೊಳ್ಳು ಪರಿಗ್ರಹದಿಂದ ದೂರವಿರಿಸುತ್ತದೆ.

ಪರಮಾತ್ಮನೇ ನಮ್ಮೆಲ್ಲರ ಆಸ್ತಿಯ ಹಕ್ಕುದಾರನು ಮತ್ತು ನಾವು, ಆತನ ಆಸ್ತಿಯ ಸಂರಕ್ಷಕರು ಮಾತ್ರ ಎಂಬ ವಿಚಾರವನ್ನು ಮನಗಾಣುವುದು ಒಂದು ಆದರ್ಶ ಧ್ಯೇಯದ ಮನೋವೃತ್ತಿ. ಒಂದು ವೇಳೆ, ಹೀಗೆ ಕಲ್ಪಿಸುವುದಕ್ಕೆ ಕಷ್ಟವಾದಲ್ಲಿ ಕಡೇ ಪಕ್ಷ ಪರಮಾತ್ಮನನ್ನನು ಒಬ್ಬ ಆತ್ಮೀಯ ಅತಿಥಿ ಎಂದಾದರೂ ಪರಿಗಣಿಸೋಣ. ಹೇಗೆ ನಾವು ಒಬ್ಬ ಗಣ್ಯರಾದ ಅತಿಥಿಯನ್ನು ಅತ್ಯಂತ ಪ್ರೀತಿಯಿಂದ ಉಪಚರಿಸುತ್ತೇವೋ, ಹಾಗೆಯೇ, ಪರಮಾತ್ಮನ ಅಸ್ತಿತ್ವವನ್ನು ನಿರಂತರವಾಗಿ ಸ್ಮರಿಸಲು, ಶುಚಿಯಾಗಿರುವ ಹಾಗೂ ವಿವಿಧ ರೀತಿಯಲ್ಲಿ

ಅಲಂಕರಿಸಿರುವ ಕೋಣೆಯನ್ನು ಅಥವಾ ಇಂತಹುದೇ ಪವಿತ್ರ ವೇದಿಕೆಯನ್ನು ನಿರ್ಮಿಸೋಣ.

ಮತ್ತೊಂದು ವಿಚಾರವೆಂದರೆ, ಪರಮಾತ್ಮನು ಸರ್ವವ್ಯಾಪಿ. ನಮ್ಮೆಲ್ಲರ ಮನೆಯಲ್ಲೂ ಆತನೂ ನಮ್ಮೊಡನೆ ವಾಸವಿರುವನು ಎಂಬುದನ್ನು ನೆನಪಿಸಲು, ನಾವು ದೇವರ ಕೋಣೆಯನ್ನು ನಿರ್ಮಿಸುತ್ತೇವೆ. ಪರಮಾತ್ಮನ ಅನುಗ್ರಹವಿಲ್ಲದೆ ಯಾವುದೇ ಕಾರ್ಯವೂ ಸಂಪೂರ್ಣವಾಗಿ ಯಶಸ್ವಿಯಾಗಲು ಸಾಧ್ಯವಿಲ್ಲ. ಆದ ಕಾರಣ, ಪ್ರತಿದಿನ ಮತ್ತು ಹಬ್ಬದ ದಿನಗಳಲ್ಲಿ, ದೇವರ ಕೋಣೆಯಲ್ಲಿ ಕುಳಿತು, ಆತನ ಅನುಗ್ರಹವನ್ನು ಪ್ರಾರ್ಥನೆಯ ಮೂಲಕ ನಾವು ಕೋರುತ್ತೇವೆ.

ಮನೆಯ ಪ್ರತಿ ಕೋಣೆಯೂ ಒಂದು ನಿರ್ದಿಷ್ಟವಾದ ಕಾರ್ಯಕ್ಕೆ ಸೀಮಿತವಾಗಿರುತ್ತದೆ. ಉದಾ: ಹಾಸಿಗೆಯಿರುವ ಕೋಣೆಯಲ್ಲಿ ನಿದ್ರಿಸುವಿಕೆ, ಬೈಠಕ್ ಖಾನೆಯಲ್ಲಿ ಅತಿಥಿಗಳನ್ನು ಭೇಟಿ ಮಾಡುವಿಕೆ, ಅಡುಗೆ ಮನೆಯಲ್ಲಿ ಅಡುಗೆ ಮಾಡುವಿಕೆ ಇತ್ಯಾದಿ. ಆಯಾಯ ಕೋಣೆಯ ವಾತಾವರಣ, ಅಲಂಕಾರ ಹಾಗೂ ಉಪಕರಣಗಳೂ ಸಹ ಅದರದರ ಕಾರ್ಯಕ್ಕೆ ಸರಿ ಹೊಂದುವ ರೀತಿಯಲ್ಲಿ ಸುಸಜ್ಜಿತವಾಗಿರುತ್ತದೆ. ಹಾಗೆಯೇ ಧ್ಯಾನ, ಪೂಜೆ, ಪ್ರಾರ್ಥನೆ ಇವುಗಳ ಉದ್ದೇಶವನ್ನು ಯಶಸ್ವಿಯಾಗಿ ಈಡೇರಿಸಲು ಸೂಕ್ತ ವಾತಾವರಣವನ್ನು ನಿರ್ಮಿಸಿಕೊಳ್ಳಬೇಕು. ಆದ್ದರಿಂದಲೇ ದೇವರ ಕೋಣೆಯ ಅವಶ್ಯಕತೆ.

ವೇದಘೋಷಗಳ ಪಠನ ಮತ್ತು ಶುದ್ಧ ಭಾವನೆಯ ಅಲೆಗಳು ದೇವರ ಕೋಣೆಯಲ್ಲಿ ವ್ಯಾಪಿಸಿ, ಅಲ್ಲಿ ಕುಳಿತವರೆಲ್ಲರ ಮನಸ್ಸು ಪರಮಾತ್ಮನೆಡೆಗೆ ಸ್ಪಂದಿಸುವ ರೀತಿಯಲ್ಲಿ ಆಕರ್ಷಿತವಾಗುತ್ತದೆ. ಅಲ್ಲಿ ನಡೆಸಿದ ನಿತ್ಯ ಧ್ಯಾನ, ಪೂಜೆ ಮತ್ತು ಮಂತ್ರಘೋಷಗಳ ಪ್ರಭಾವದಿಂದ, ಅಧ್ಯಾತ್ಮಿಕ ವಿಚಾರ ಲಹರಿ ಹಾಗೂ ಅದರ ಸ್ಪಂದನ ಶಕ್ತಿಗಳು ಶೇಖರಿಸಲ್ಪಟ್ಟು, ಇಡೀ ಕೋಣೆಯನ್ನು ವ್ಯಾಪಿಸಿರುತ್ತದೆ. ನಮ್ಮ ಶಾರೀರಿಕ ಅಥವಾ ಮಾನಸಿಕ ತೊಂದರೆಗಳು ಏನೇ ಇದ್ದರೂ ದೇವರ ಕೋಣೆಯಲ್ಲಿ ಕೇವಲ ಸ್ವಲ್ಪ ಹೊತ್ತು ಕುಳಿತು ಕೊಳ್ಳುವುದರಿಂದ ನಾವು ಶಾಂತಿ, ಸಮಾಧಾನಗಳನ್ನು ಅನುಭಾವಿಸಿ ನವಚೈತನ್ಯವನ್ನು ಕೂಡಿಕೊಂಡು ಆಧ್ಯಾತ್ಮಿಕತೆಯಲ್ಲಿ ಮತ್ತೂ ಮೇಲೇರಿದಂತಾಗುತ್ತದೆ.

*(ವತ್ಸಲಾ, ಬೆಂಗಳೂರು)*

---

## ತರ್ಲೆ ಮಾತು

ಮೇಷ್ಟ್ರು: ಒಂದು ಕೆಲಸವನ್ನು ಒಬ್ಬ ಹೆಂಗಸು ಒಂದು ಗಂಟೆಯಲ್ಲಿ ಮುಗಿಸಿದರೆ, ಅದೇ ಕೆಲಸವನ್ನು ನಾಲ್ವರು ಹೆಂಗಸರು ಒಟ್ಟಿಗೆ ಕೂಡಿ ಮಾಡಿದರೆ ಎಷ್ಟು ಟೈಂ ಬೇಕಾಗುತ್ತದೆ?

ಸುಬ್ಬ: ನಾಲ್ಕು ಗಂಟೆ ಬೇಕಾಗುತ್ತೆ.

ಮೇಷ್ಟ್ರು: ತಪ್ಪು ಕಣೋ ಸುಬ್ಬ. ಕಾಲು ಗಂಟೆ ಸಾಕು. ನಿನಗೆ ಲೆಕ್ಕ ಗೊತ್ತಿಲ್ಲ.

ಸುಬ್ಬ: ಸಾರ್, ನಿಮಗೆ ಲೆಕ್ಕ ಗೊತ್ತಿರಬಹುದು. ಆದರೆ ಹೆಂಗಸರ ಬಗ್ಗೆ ಗೊತ್ತಿಲ್ಲ ಬಿಡಿ.



# ಚಂದದ ಚಂದೇರಿ ಸೀರೆ

ಸೀರೆಗಳಲ್ಲಿನ ವೈವಿಧ್ಯ, ವಿನ್ಯಾಸ ನಿಜಕ್ಕೂ ಬೆರಗು ಮೂಡಿಸುತ್ತದೆ. ಸೀರೆಯ ಅದರಲ್ಲೂ ರೇಷ್ಮೆ ಸೀರೆಯ ವ್ಯಾಮೋಹಕ್ಕೆ ವಯಸ್ಸಿನ ಭೇದವಿಲ್ಲ. ಮ್ಯಾಕ್ಸಿ, ಮಿಡಿ, ಜೀನ್ಸ್, ಚೂಡಿದಾರ ತೊಡುವವರೂ ಕೂಡ ಒಂದಾದರೂ ರೇಷ್ಮೆಸೀರೆ ಇಟ್ಟುಕೊಂಡಿರುತ್ತಾರೆ. ಸಾಂಪ್ರದಾಯಿಕ ಚೆಲುವು ಹಾಗೂ ಆಧುನಿಕತೆಯ ಮೆರುಗು ಎರಡನ್ನೂ ಪರಿಣಾಮಕಾರಿಯಾಗಿ ಬಿಂಬಿಸುವ ಭಾರತದ ಶ್ರೇಷ್ಠ ನೇಯ್ಗೆ ಕೇಂದ್ರಗಳಲ್ಲಿ ಚಂದೇರಿ ಕೂಡ ಒಂದು.

ಮಧ್ಯಪ್ರದೇಶದ ಗು ಣಜಿಲ್ಲೆಯ ನರ್ಮದಾ ನದಿಯ ತಟದಲ್ಲಿರುವ ಈ ಪುಟ್ಟ ಪಟ್ಟಣ ತನ್ನ ಕೈಮಗ್ಗದ ವಿಶಿಷ್ಟ ನವಿರಾದ ಹತ್ತಿ, ಹತ್ತಿಮಿಶ್ರಿತ ರೇಷ್ಮೆ ಹಾಗೂ ರೇಷ್ಮೆ ಸೀರೆಗಳಿಗಾಗಿ ಸುಪ್ರಸಿದ್ಧ. ಒಂದು ಕಾಲಕ್ಕೆ ಹತ್ತಿ ಸೀರೆಗಳಂತೂ ಢಾಕಾ ಮಸ್ಲಿನ್‌ನಷ್ಟೇ ಖ್ಯಾತಿ ಹೊಂದಿ ದಂತಕಥೆಯೆನಿಸಿದ್ದವು. ಈ ಸೀರೆಗಳು ಇಂದಿಗೂ ತಮ್ಮ ವಿಶಿಷ್ಟ ನೇಯ್ಗೆ, ವಿನ್ಯಾಸಗಳು, ಕಣ್ಣಿಗೆ ತಂಪೆನ್ನಿಸುವ ಹಿತಕರ ಬಣ್ಣಗಳು, ಹೊಳಪು ಹಾಗೂ ಅರೆಪಾರದರ್ಶಕ ಗುಣಗಳಿಂದಾಗಿ ತುಂಬ ಬೇಡಿಕೆಯಲ್ಲಿವೆ. ತಮ್ಮ ಮೋಹಕತೆಗೆ ಮಂತ್ರಮುಗ್ಧರಾಗಿರುವ ಅಭಿಮಾನಿಗಳ ಒಂದು ದೊಡ್ಡ ಬಳಗವನ್ನೇ ಸೃಷ್ಟಿಸಿಕೊಂಡಿದೆ ಈ ಸೀರೆ! ಈ ಸೀರೆಯ ಕುರಿತಾಗಿ ಮಹಾಭಾರತದಲ್ಲಿ ಕೂಡ ಅನೇಕ ಉಲ್ಲೇಖಗಳಿವೆ.

ಚಂದೇರಿ ನೇಯ್ಗೆಯು ದೊಡ್ಡ ಪ್ರಮಾಣದಲ್ಲಿ ಕೈಮಗ್ಗಗಳನ್ನು ಅವಲಂಬಿಸಿದೆ. ಭಾರತದ ಅತ್ಯಂತ ಉತ್ಕೃಷ್ಟ, ಕಲಾತ್ಮಕ ಬಟ್ಟೆ ಈ ಸರಳ ಕೈಮಗ್ಗಗಳಲ್ಲಿ ಮೂಡಿಬರುತ್ತದೆ. ಅತ್ಯಂತ ಕಲಾತ್ಮಕವಾಗಿ ನೇಯ್ದ ಚಂದೇರಿ ಸೀರೆಗಳಿಗೆ ಇಂದಿಗೂ ಭಾರಿ ಬೇಡಿಕೆ ಇದೆ.



ಕ್ರಿ.ಶ. 1350ಕ್ಕಿಂತ ಮೊದಲು ಚಂದೇರಿ ನೇಯ್ಗೆ ಮುಸ್ಲಿಂ ಸಮುದಾಯಕ್ಕೆ ಮಾತ್ರ ಮೀಸಲಾಗಿತ್ತು. ನಂತರ ಕೋಶ್ಟಿ ನೇಕಾರರು ಚಂದೇರಿಗೆ ಬಂದು ಅಲ್ಲಿಯೇ ನೆಲೆ ನಿಂತು ಈ ನೇಯ್ಗೆ ಪ್ರಕಾರವನ್ನು ಜನಪ್ರಿಯಗೊಳಿಸಿದರು ಎಂದು ಹೇಳಲಾಗುತ್ತದೆ. ಮೊಘಲರ ಕಾಲದಲ್ಲಿ ಚಂದೇರಿ ನೇಯ್ಗೆ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಒಂದು ಸಾರಿ, ಪುಟ್ಟ ಬೊಂಬಿನಲ್ಲಿ (ಬಿದಿರು) ಸುರುಳಿ ಸುತ್ತಲಾಗಿದ್ದ ಚಂದೇರಿ ವಸ್ತ್ರವೊಂದು ಅಕ್ಬರ್ ಬಾದಶಹನಿಗೆ ಕಾಣಿಕೆಯಾಗಿ ಬಂತು. ಬಿಚ್ಚಿ ನೋಡಿದರೆ ಒಂದು ದೊಡ್ಡ ಆನೆಯನ್ನೇ

ಮುಚ್ಚಬಲ್ಲಷ್ಟು ದೊಡ್ಡದಾದ ಕಲಾತ್ಮಕ ಚಂದೇರಿ ವಸ್ತ್ರ!

ಮೊದ ಮೊದಲು ಕೇವಲ ಹತ್ತಿ ವಸ್ತ್ರಗಳಿಗೆ ಮಾತ್ರ ಸೀಮಿತವಾಗಿದ್ದ ಚಂದೇರಿ ನೇಯ್ಗೆ, ಔದ್ಯೋಗೀಕರಣದ ಗಾಳಿ ಬೀಸಿದ ಮೇಲೆ ತನ್ನ ಢಾಕಾ ಮಸ್ಲಿನ್ ಖ್ಯಾತಿಯನ್ನು ಕಳೆದುಕೊಂಡಿತು. ಬ್ರಿಟಿಷರು ಆಮದು ಮಾಡಿಕೊಂಡ ಚಂದೇರಿ ನೇಯ್ಗೆಗೆ ಸೂಕ್ತವಲ್ಲದ ಮ್ಯಾಂಚೆಸ್ಟರ್ ಹತ್ತಿ ನೂಲಿನಿಂದಾಗಿ ಈ ಉದ್ಯಮ ಸಂಕಷ್ಟಕ್ಕೆ ಗುರಿಯಾಯಿತು. ಹೀಗಾಗಿ ಅನಿವಾರ್ಯವಾಗಿ ನೇಕಾರರು ಹಾಸಿಗಾಗಿ ರೇಷ್ಮೆ ನೂಲಿನತ್ತ ಗಮನ ಹರಿಸಿದರು. ಚಂದೇರಿಗೆ ರೇಷ್ಮೆ ಲಗ್ಗೆ ಇಟ್ಟದ್ದೇ ಈ ರೀತಿಯಾಗಿ. 1930ರ ಸುಮಾರಿಗೆ ಜಪಾನಿನ ರೇಷ್ಮೆ ಆಗಮನದೊಂದಿಗೆ ರೇಷ್ಮೆ ಸೀರೆಗಳ ಉತ್ಪಾದನೆ ಹೆಚ್ಚಾಯಿತು.

ಕೈಮಗ್ಗದಲ್ಲಿ ನೇಕಾರ ತನ್ನ ಭಾವನೆಗಳನ್ನು ಹಾಗೂ ಕಲ್ಪನೆಗಳನ್ನು ನೇಯ್ಗೆಯ ಮೂಲಕ ಅಭಿವ್ಯಕ್ತಗೊಳಿಸುತ್ತಾನೆ. ಈ ಗುಡಿಕಾರರ ಹಸ್ತನೈಪುಣ್ಯ, ಚಾಕಚಕ್ಯತೆ, ನವಿರಾದ ಸುಂದರ ವರ್ಣ ಸಂಯೋಜನೆಯ ಜಾಣ್ಮೆಯನ್ನು ನೋಡಿಯೇ ತಿಳಿಯಬೇಕು. ಸಾಮಾನ್ಯವಾಗಿ ಚಂದೇರಿ ಸೀರೆಗಳನ್ನು ಸಾಂಪ್ರದಾಯಿಕ ಪಿಟ್‌ಲೂಮ್‌ಗಳಲ್ಲಿ ನೇಯಲಾಗುತ್ತಿದ್ದು, ಡಾಬಿ ಹಾಗೂ ಜಕಾರ್ಡ್‌ಗಳನ್ನು ಇಲ್ಲಿ ಅಳವಡಿಸಿಕೊಳ್ಳಲಾಗುತ್ತಿತ್ತು. ಮೂರು ಶಟಲ್‌ಗಳ ಇಬ್ಬರು ನೇಕಾರರು ಬೇಕಾಗುವ ನಾಲ್ ಫೆರ್ನಾ ತಾಂತ್ರಿಕ ಮಗ್ಗಗಳಿಗಾಗಿ ಪ್ರಸಿದ್ಧಿ ಹೊಂದಿದ ಚಂದೇರಿಯಲ್ಲಿಂದು ಹೆಚ್ಚುಕಡಿಮೆ ಎಲ್ಲವೂ ಮಗ್ಗಗಳೇ!

**ನೇಯ್ಗೆ ತಂತ್ರ**

ಚಂದೇರಿಯ ನೇಯ್ಗೆಯಲ್ಲಿ ಅನೇಕ ನೇಯ್ಗೆ ತಂತ್ರಗಳಿವೆ. ಉದಾಹರಣೆಗೆ ದೋಕಶಮಿ ಸೀರೆಗಳಲ್ಲಿ ಒಂದೇ ಸೀರೆಯ ಅಂಚುಗಳೆರಡೂ ಬೇರೆ ಬೇರೆ ಬಣ್ಣಗಳನ್ನು ಹೊಂದಿದ್ದರೆ (ಗಂಗಾ-ಜಮುನಾ) ಒಂದೇ ಅಂಚಿನ ಎರಡು ಬದಿಗಳಿಗೂ ಬೇರೆ ಬೇರೆ ವರ್ಣಗಳು ಬರುವಂತೆ ನೇಯಲಾಗುತ್ತಿತ್ತು. ಇಂದು ಇಂಥ ನೇಯ್ಗೆ ಅತ್ಯಂತ ಕಷ್ಟಸಾಧ್ಯ ಎಂದು ಹೇಬಹುದು. ಚಂದೇರಿಯ ನೇಯ್ಗೆ ಶೈಲಿಯನ್ನು ಇನ್ನಿತರ ನೇಯ್ಗೆ ಕೇಂದ್ರಗಳಲ್ಲಿ ಅನುಸರಿಸಿದರೂ ಅದಕ್ಕೆ ಚಂದೇರಿಯ ಸೀರೆಗಳಿಗಿರುವ ಬೆಡಗನ್ನು ಕೊಡುವುದು ಅಸಾಧ್ಯವೆಂದೇ ಹೇಳಬಹುದು. ಅಂದು ಮರಾಠ ರಾಜಕುಟುಂಬದವರಂತೂ ಚಂದೇರಿಯ ವಿಶಿಷ್ಟವಾದ ಆರು ಅಂಗುಲದ ವಿಶೇಷ ಮಗ್ಗಗಳಲ್ಲಿ ನೇಯ್ದ ವಸ್ತ್ರಗಳಿಂದ ತಯಾರಿಸಿದ ಟರ್ಬನ್‌ಗಳನ್ನೇ (ರುಮಾಲು) ಬಳಸುತ್ತಿದ್ದರು. ಮಹಾರಾಷ್ಟ್ರದ ಪ್ರಖ್ಯಾತ ಪೈಠಣಿ ಪೀತಾಂಬರಗಳನ್ನು ಕೂಡ ಒಂದು ಕಾಲಕ್ಕೆ ಚಂದೇರಿಗೆ ನೇಯ್ಗೆಗಾಗಿ ಕಳುಹಿಸಲಾಗುತ್ತಿತು. ಇದು ಚಂದೇರಿ ನೇಕಾರರ ಕಲಾಕೌಶಲ್ಯಕ್ಕೆ ಹಿಡಿದ ಕನ್ನಡಿ! ಚಂದೇರಿ ಸೀರೆ ತನ್ನ ಅನುಪಮತೆಯನ್ನು ಈ ತಾಂತ್ರಿಕ ಯುಗದಲ್ಲೂ ಸಹ ಬೆಳೆಸಿಕೊಂಡು ಬರಲು ಗುಡಿಕಾರರು ಚಾತುರ್ಯದಿಂದ ಈ ವಸ್ತ್ರಕ್ಕೆ ನೀಡುವ ಸೊಬಗೇ ಕಾರಣ.

*(ಮುಂದುವರಿಯುವುದು)*



# ಸರ್ವಪಲ್ಲಿಗೆ ಬೀಳ್ಕೊಡುಗೆಯ ಮೆಲುಕು



ಎ.ಎನ್. ಮೂರ್ತಿರಾವ್, ವಿ. ಸೀತಾರಾಮಯ್ಯ ಮುಂತಾದ ಹಿರಿಯ ಕನ್ನಡ ಲೇಖಕರ ಒಂದು ಮಹಾಸ್ಮೃತಿ ಹೀಗಿದೆ: ಸರ್ವಪಲ್ಲಿ ರಾಧಾಕೃಷ್ಣನ್ ಅವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತತ್ವಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು. ಅವರ ಪಾಂಡಿತ್ಯ, ವಾಗ್ವಿಲಾಸ, ವಾತ್ಸಲ್ಯ ಅವರಿಗೆ ಸರ್ವಪ್ರೀತಿ ದೊರಕಿಸಿತು. ಅವರು ವಿದ್ಯಾರ್ಥಿಗಳ ಕಣ್ಮಣಿಯಾಗಿದ್ದರು. 1921ರ ಆದಿಭಾಗದಲ್ಲಿ ಅವರು ಕಲ್ಕತ್ತೆಯ ಐದನೆಯ ಜಾರ್ಜ್ ತತ್ವಶಾಸ್ತ್ರದ ಪ್ರಾಧ್ಯಾಪಕರಾಗಿ ನೇಮಕಗೊಂಡು, ಮೈಸೂರಿನಿಂದ ಹೊರಟರು. ವಿದ್ಯಾರ್ಥಿಗಳು ಅವರಿಗೆ ಅಂದು ನೀಡಿದ್ದು ಅದ್ದೂರಿಯ ಬೀಳ್ಕೊಡುಗೆ.

ಅರಮನೆಯಿಂದ ತಂದಿದ್ದ ವಿಕ್ಟೋರಿಯಾ ಗಾಡಿಯನ್ನು ಸರ್ವಾಲಂಕಾರದಿಂದ ವಿದ್ಯಾರ್ಥಿಗಳು ಹೂಪಲ್ಲಕ್ಕಿಯಾಗಿಸಿದರು. ಲಕ್ಷ್ಮೀಪುರದಲ್ಲಿದ್ದ ಅವರ ಮನೆಯಿಂದ ಮಹಾರಾಜ ಕಾಲೇಜಿನವರೆಗೆ, ಕಾಲೇಜಿನಿಂದ ರೈಲು ನಿಲ್ದಾಣದವರೆಗೆ ಆ ಹೂವಿನ ತೇರನ್ನು ವಿದ್ಯಾರ್ಥಿಗಳೇ ಕೈಹಾಕಿ ಎಳೆದರು. ಕಾಲೇಜಿನ ಅಧ್ಯಾಪಕರು ಆ ಹೂವಿನಗಾಡಿಗೆ ಅಶ್ವಪಂಕ್ತಿಗಳಾದರು. ದಾರಿಯ ಇಕ್ಕೆಲಗಳಲ್ಲೂ ಜನಸ್ತೋಮ, ವಿದ್ಯಾರ್ಥಿಗಳ ಉತ್ಸಾಹದ ಜೈಕಾರ. ಗುರುಗಳು ಬಂದೆಡೆಗಳಲ್ಲೆಲ್ಲ ಗುಲಾಬಿ, ಜಾಜಿ, ಸೇವಂತಿಗೆಗಳ ಹೂಮಳೆ. ರಾಧಾಕೃಷ್ಣನ್ ಪ್ರಯಾಣಿಸುವ ರೈಲುಬೋಗಿಯನ್ನು ಮಲ್ಲಿಗೆಯ ಹೂಸರಗಳಿಂದ ಅಲಂಕರಿಸಿದ್ದರು.

ಒರಗುದಿಂಬು, ರತ್ನಗಂಬಳಿ ಹರಡಿದ್ದ ಬಿಡಿಹೂವಿನ ಹಚ್ಚಡಗಳಿಂದ ಬೋಗಿ ಹೂಬಂಡಿಯಾಗಿತ್ತು. ಕಾಲೇಜಿನ ಹಿರಿಯ ಪ್ರಾಧ್ಯಾಪಕರು, ಮೈಸೂರಿನ ಗಣ್ಯ ನಾಗರಿಕರು, ಜನಸಮುದಾಯ, ವಿದ್ಯಾರ್ಥಿ ಸ್ತೋಮ ಭಾವೋದ್ರೇಕದಿಂದ, ಆನಂದಬಾಷ್ಪದಿಂದ ಅವರನ್ನು ಬೀಳ್ಕೊಟ್ಟಿತು.

''ಆ ದಿನ ಶಿಷ್ಯರು ನನ್ನಲ್ಲಿ ತೋರಿದ ವಿಶ್ವಾಸವನ್ನು ನೆನೆದರೆ ಈಗಲೂ ಕಣ್ಣೀರು ಉಕ್ಕುತ್ತದೆ'' ಎಂದು ತಮ್ಮ ಶಿಷ್ಯರ ಬಳಿ ರಾಧಾಕೃಷ್ಣನ್ ಹೇಳುತ್ತಿದ್ದರಂತೆ. ಇದು ಜ್ಞಾನಪ್ರಿಯ ಅಧ್ಯಾಪಕರಿಗೆ ವಿದ್ಯಾರ್ಥಿಗಳು ತೋರಿದ ಗುರುಭಕ್ತಿಯ ವಿದಾಯ. ಇದೇ ಸರ್ವಪಲ್ಲಿಯವರು ಭಾರತದ ರಾಷ್ಟ್ರಪತಿಗಳಾದರು.

*ಸಂಗ್ರಹ: ರಾಜನ್, ಮೈಸೂರು*

# ಅಂತರಂಗ ಶುದ್ಧಿ – ಬಹಿರಂಗ ಶುದ್ಧಿ

ಶೌಚ ಎಂದರೆ ಶುಚಿ. ಎಲ್ಲಿ ಶುಚಿತ್ವವಿರುತ್ತದೋ ಅಲ್ಲಿ ದೇಹ-ಮನಸ್ಸುಗಳೆರಡೂ ಪ್ರಫುಲ್ಲವಾಗಿರುತ್ತವೆ. ದೇಹ-ಮನಸ್ಸು ಎರಡನ್ನೂ ಸುಂದರಗೊಳಿಸಬೇಕಾದಲ್ಲಿ ಎರಡು ರೀತಿಯ ಶುಚಿತ್ವವನ್ನು ಕಾಪಾಡಿಕೊಳ್ಳಬೇಕಾಗುತ್ತದೆ. ಮೊದಲನೆಯದು ಬಹಿರಂಗ ಶುಚಿತ್ವ. ಎರಡನೆಯದು ಅಂತರಂಗ ಶುಚಿತ್ವ.

ಬಹಿರಂಗ ಶುಚಿತ್ವಕ್ಕೇನೂ ಅಡ್ಡಿಯಿಲ್ಲ, ಹಂಡೆಗಟ್ಟಲೆ ನೀರು ಕಾಯಿಸಿ, ಚೆನ್ನಾಗಿ ಉಜ್ಜಿ ಬಿಸಿನೀರಿನ ಸ್ನಾನ ಮಾಡಬಹುದು. ಬಗೆ ಬಗೆಯ ಸಾಬೂನುಗಳು ಬಂದಿವೆ. ಘಮ್ಮೆನ್ನುವ ಕಾಸ್ಮೆಟಿಕ್‌ಗಳಿಗೂ ಕೊರತೆ ಇಲ್ಲ. ಇವನ್ನೆಲ್ಲಾ ಬಳಸಿ ದೇಹವನ್ನು ಮಿರಮಿರನೆ ಮಿಂಚುವಂತೆ ಮಾಡಿಕೊಳ್ಳಬಹುದು. ಹಲವು ರೀತಿಯ ಸುವಾಸಿತ ಎಣ್ಣೆಗಳನ್ನೂ ಬಳಸಿ ಇಡೀ ದೇಹವನ್ನು ಘಮಘಮಿಸುವಂತೆಯೂ ಮಾಡಿಕೊಳ್ಳಬಹುದು. ಆದರೆ ಅಂತರಂಗ ಶುಚಿತ್ವ!? ಮನಸ್ಸನ್ನು ಹಿಡಿದು ತಂದು ಬಿಸಿನೀರು ಸ್ನಾನ ಮಾಡಿಸಲು ಸಾಧ್ಯವಿಲ್ಲ. ಸಾಬೂನು ಕಾಸ್ಮೆಟಿಕ್ಸ್‌ಗಳನ್ನು ಹಚ್ಚಲೂ ಸಾಧ್ಯವಿಲ್ಲ. ಆದ್ದರಿಂದಲೇ ಎಷ್ಟೋ ಮಂದಿ ದೇಹವನ್ನು ಸುಂದರವಾಗಿಟ್ಟುಕೊಂಡರೂ ಮನಸ್ಸನ್ನು ಕೊಳೆತು ನಾರುವಂತೆ ಮಾಡಿಕೊಂಡಿರುತ್ತಾರೆ. ಇನ್ನು ಕೆಲವು ಮಂದಿ ಅಂತರಂಗವನ್ನು ಶುದ್ಧೀಕರಿಸಿಕೊಂಡು ದೇಹವನ್ನು ಕೊಳಕು ಮಾಡಿಕೊಂಡಿರುತ್ತಾರೆ. ಬರೇ ಬಹಿರಂಗ ಶುದ್ಧಿ ಮಾತ್ರ ಇದ್ದು, ಅಂತರಂಗ ಶುದ್ಧಿ ಇದ್ದರೆ ಸಮಾಜಕ್ಕೆ ಅಪಾಯ. ಅಂತರಂಗ ಶುದ್ಧಿಗಷ್ಟೇ ಮನ್ನಣೆ ಕೊಟ್ಟು ಬಹಿರಂಗಕ್ಕೆ ಅಸಡ್ಡೆ ತೋರಿದರೆ ವ್ಯಕ್ತಿಗೇ ಅಪಾಯ.

ಅಂತರಂಗ-ಬಹಿರಂಗ ಎರಡೂ ಒಟ್ಟಿಗೇ ಶುದ್ಧಿಯಾಗಿರುವುದೇ ನಿಜವಾದ ಅರ್ಥ ಶೌಚ. ಬಹಿರಂಗ ಶುಚಿತ್ವಕ್ಕಿಂತ ಅಂತರಂಗ ಶುಚಿತ್ವಕ್ಕೆ ಹೆಚ್ಚಿನ ಸರ್ಕಸ್ ಮಾಡಬೇಕಾಗಿದೆ. ಇದನ್ನು ದಿಢೀರನೆ ಆರಂಭಿಸಲು ಬರುವುದಿಲ್ಲ. ಅಂತರಂಗ ಶುಚಿತ್ವಕ್ಕೆ ಪ್ರಾಥಮಿಕ ಹಂತ ಬೇಕೇ ಬೇಕು. ಎಳೆಯ ಮಕ್ಕಳ ಹೃದಯದ ಪದರುಗಳಲ್ಲಿ ಕಸ-ಕಡ್ಡಿಗಳು ಕೂಡಿ ತಿಪ್ಪೆಯಾಗದಂತೆ ನೋಡಿಕೊಳ್ಳುವುದು ಎಲ್ಲ ಉಪಾಧ್ಯಾಯರ ಕರ್ತವ್ಯವಾಗಿದೆ. ಈ ಕೆಲಸ ಶಿಕ್ಷಕನಿಂದ ಆಗಬೇಕಾದರೆ, ಮೊದಲು ಶಿಕ್ಷಕ ತನ್ನ ಹೃದಯವನ್ನು ಹಸನು ಮಾಡಿಕೊಳ್ಳಬೇಕು. ತನ್ನ ಹೃದಯದಲ್ಲೇ ಕೀವು ಅಡಗಿಸಿಕೊಂಡರೆ, ಮಕ್ಕಳ ಹೃದಯದಲ್ಲಿ ಅದೆಷ್ಟು ಒಳಿತನ್ನು ಬಿತ್ತಲು ಸಾಧ್ಯವಾದೀತು?

ಮಕ್ಕಳ ಮನಸ್ಸು ಬಿಳಿಯ ಶುದ್ಧ ಹಾಳೆ ಇದ್ದಂತೆ. ಕೆಂಪು ಶಾಯಿ ಚೆಲ್ಲಿದರೆ ಅದನ್ನೇ ಹೀರಿ ಕೆಂಪಾಗುತ್ತದೆ. ಕಪ್ಪುಶಾಯಿ ಚೆಲ್ಲಿದರೆ ಅದನ್ನೇ ಹೀರಿ ಕಪ್ಪಾಗುತ್ತದೆ. ಇಂಹ ಮಕ್ಕಳ ಮನಸ್ಸು ಎಂಬ ಬಿಳಿ ಹಾಳೆಯ ಮೇಲೆ ತಂದೆ-ತಾಯಿ-ಶಿಕ್ಷಕ ಮೂವರೂ ಸೇರಿ ಏನನ್ನು ಕೆತ್ತುತ್ತಾರೋ ಅದೇ ಅವನ ಬದುಕಿನ ಭವಿಷ್ಯವಾಗುತ್ತದೆ.

ಜಾತಿ-ಧರ್ಮಗಳ ಕಿತ್ತಾಟದ ಇಂದಿನ ದಿನಕ್ಕಂತೂ ಅಂತರಂಗ ಶುಚಿತ್ವ ಹೆಚ್ಚಿನ ಬೆಲೆಯುಳ್ಳದ್ದಾಗಿದೆ. ಬರೆ ಬಾಯಿ ಮಾತಿನಲ್ಲಿ ಶಾಂತಿ, ಶಾಂತಿ ಎಂದರೆ ಶಾಶ್ವತವಾದ ಶಾಂತಿ ನೆಲೆಸುವುದಿಲ್ಲ. ಕ್ರಾಂತಿಯಾಗಬೇಕು. ಅದೂ ಅಂತರಂಗದ ಶುಚಿತ್ವದ ಕ್ರಾಂತಿಯಾದಾಗ ಮಾತ್ರ ಪರ್ಮನೆಂಟ್ ಶಾಂತಿ ನೆಲೆಸೀತು. ಈ ನಿಟ್ಟಿನಲ್ಲಿ ಶಿಕ್ಷಕ ಪುಟ್ಟ ಕಂದಮ್ಮಗಳ ಹೃದಯದಲ್ಲಿ ಕ್ರಾಂತಿ ಮಾಡಿಸಿಯಾನೇ/ಳೇ?

*(ಅನುಶ್ರೀ, ಶಿಕ್ಷಕಿ)*



# ಸ್ವರ್ಗದ ಹಣ್ಣು ಬಾಳೆಹಣ್ಣು

ಈ ಸ್ವರ್ಗದ ಹಣ್ಣಿನ ಉಗಮಸ್ಥಾನ ಭಾರತ. ಭಾರತದ ಎಲ್ಲಾ ರಾಜ್ಯಗಳಲ್ಲೂ ಈ ಹಣ್ಣು ಬೆಳೆಯುತ್ತದೆ. ಕರ್ನಾಟಕ, ಕೇರಳ, ಅಸ್ಸಾಂ, ತಮಿಳುನಾಡು, ಆಂಧ್ರ, ಬಂಗಾಳದಲ್ಲಿ ವೈವಿಧ್ಯಮಯ ಬಾಳೆಹಣ್ಣುಗಳನ್ನು ಬೆಳೆಯುತ್ತಾರೆ. ಅಲೆಗ್ಸಾಂಡರ್ ದೊರೆ ಬಾಳೆಹಣ್ಣನ್ನು ಸೇವಿಸಿದ ಮೊತ್ತಮೊದಲ ಯೂರೋಪಿಯನ್ ಎಂದು ನಂಬಲಾಗಿದೆ. ಬಾಳೆಹಣ್ಣಿನ ರುಚಿಗೆ ಮರುಳಾದ ಅಲೆಗ್ಸಾಂಡರ್ ಅದನ್ನು ಇತರೆ ದೇಶಗಳಿಗೆ ಪರಿಚಯಿಸಿದ. ಆಫ್ರಿಕಾ, ಈಜಿಪ್ಟ್‌ಗಳಿಂದ ಅರಬ್ ಮಾರುಕಟ್ಟೆಯನ್ನು ಪ್ರವೇಶಿಸಿದ ಬಾಳೆ ಈಗ ಪ್ರಪಂಚದಾದ್ಯಂತ ಎಲ್ಲರ ಅಚ್ಚುಮೆಚ್ಚಿನ ಹಣ್ಣಾಗಿದೆ.

ಬಾಳೆಹಣ್ಣಿನಲ್ಲಿ ಮುಖ್ಯವಾದ ತಳಿಗಳೆಂದರೆ ಪುಟ್ಟಬಾಳೆ ಅಥವಾ ಬಿಳಿ ಪುಟ್ಟ ನಂಜನಗೂಡಿನ ರಸಬಾಳೆ. ಪುಟ್ಟಬಾಳೆ ಅಥವಾ ದೇವರ ಬಾಳೆ. ಪುಟ್ಟ ಬಾಳೆ ಮತ್ತು ಪಚ್ಚಬಾಳೆ ಅತಿಹೆಚ್ಚಾಗಿ ಎಲ್ಲೆಡೆ ಬಳಕೆಯಲ್ಲಿದೆ. ಏಲಕ್ಕಿಬಾಳೆ ಮತ್ತು ರಸಬಾಳೆ ಮೈಸೂರು ನಗರದಲ್ಲಿ ಹೆಚ್ಚಾಗಿ ದೊರೆತರೆ, ನೇಂದ್ರಬಾಳೆ ಮಲೆನಾಡಿನಲ್ಲಿ ಹೆಚ್ಚು ಬಳಕೆಯಲ್ಲಿದೆ.

ಬಾಳೆಹಣ್ಣು ಯಾವುದಾದರೂ ಅದು ಶಕ್ತಿಯ ಆಗರವೇ ಹೌದು. ಬಾಳೆಹಣ್ಣಿನಲ್ಲಿ ಪ್ರೋಟೀನ್, ವಿಟಮಿನ್, ಮಿನರಲ್, ಟಿಷ್ಯೂ ಬಿಲ್ಡಿಂಗ್ ಎಲಿಮೆಂಟ್‌ಗಳು ಧಾರಾಳವಾಗಿವೆ. ಒಂದು ದೊಡ್ಡದಾದ ಪಚ್ಚ ಬಾಳೆಹಣ್ಣಿನಲ್ಲಿ 100 ಕ್ಯಾಲೊರಿಗಿಂತ ಹೆಚ್ಚು ಶಕ್ತಿ ದೊರೆಯುತ್ತದೆ. ಒಂದು ದೊಡ್ಡ ಬಾಳೆಹಣ್ಣಿನಲ್ಲಿ ಶೇಕಡಾ 75 ನೀರು, 22.1 ಕಾರ್ಬೊಹೈಡ್ರೇಟ್ಸ್, 1.1 ಪ್ರೋಟೀನ್ ಹಾಗೂ ಶೇ. 0.21 ಕೊಬ್ಬು ಇರುತ್ತದೆ. ಸುಲಭವಾಗಿ ಕರಗುವ ಸಕ್ಕರೆಯ ಅಂಶವನ್ನು ಅಧಿಕವಾಗಿ ಹೊಂದಿರುವುದರಿಂದ ಇದನ್ನು ತಿಂದರೆ ಶಕ್ತಿ ಬರುತ್ತದೆ. ಅದಕ್ಕಾಗಿಯೇ ಯೂರೋಪಿನ ಫುಟ್‌ಬಾಲ್ ಆಟಗಾರರು, ಟೆನ್ನಿಸ್ ಆಟಗಾರರು ಬಾಳೆಹಣ್ಣನ್ನು ಡಜನ್‌ಗಟ್ಟಲೆ ತಿಂದು ಆಟವಾಡುತ್ತಾರೆ.

ನಮ್ಮ ಮಲೆನಾಡಿಗರು ಬಾಳೆಹಣ್ಣನ್ನು ಒಣಗಿಸಿ ಡಬ್ಬದಲ್ಲಿ ತುಂಬಿ ಮಳೆಗಾಲದಲ್ಲಿ ತಿನ್ನಲು ಬಳಸುತ್ತಾರೆ. ಈ ರೀತಿ ಒಣಗಿಸಿದ ಬಾಳೆಹಣ್ಣಿನಲ್ಲಿ ಪ್ರತಿ 100 ಗ್ರಾಂನಲ್ಲಿ 25 ಕ್ಯಾಲೊರಿ ಶಕ್ತಿಯಿದ್ದು ದೇಹಕ್ಕೆ ಪುಷ್ಟಿ ನೀಡುತ್ತದೆ. ಬಾಳೆಹಣ್ಮು ಸುಲಭವಾಗಿ ಜೀರ್ಣವಾಗುವುದರಿಂದ ಮಕ್ಕಳಿಗೂ ಇದನ್ನು ಚೆನ್ನಾಗಿ ತಿನ್ನಿಸಬಹುದು. ಬಾಳೆಹಣ್ಣಿನಲ್ಲಿ ಕಾರ್ಬೊಹೈಡ್ರೇಟ್ಸ್ ಮಾತ್ರವಲ್ಲದೆ ಪೊಟಾಷಿಯಂ, ವಿಟಮಿನ್-ಎ, ಬಿ, ಸಿ, ಮೆಗ್ನೀಷಿಯಂ, ಕಬ್ಬಿಣ ಸ್ವಲ್ಪ ಪ್ರಮಾಣದಲ್ಲಿರುತ್ತದೆ.

ವಿಶ್ವದಾದ್ಯಂತ ಬಾಳೆಹಣ್ಣಿಗೆ ಈಗ ಭಾರಿ ಬೇಡಿಕೆ ಇದ್ದು ಬಿಲಿಯನ್‌ಗಟ್ಟಲೆ ಹಣ್ಣು ಖರ್ಚಾಗುತ್ತಿದೆ. ಇದರಲ್ಲಿ ಜಪಾನ್, ಇಂಗ್ಲೆಂಡ್ ದೇಶಗಳು ಮುಂಚೂಣಿಯಲ್ಲಿವೆ. ಪ್ರಪಂಚದ ಏಕೈಕ ಬಾಳೆಹಣ್ಣಿನ ಮ್ಯೂಸಿಯಂ ಜರ್ಮನಿಯ ಸ್ಲೇಕಡಾಟ್‌ನಲ್ಲಿದೆ.

ಬೆಳಗಿನ ಹೊತ್ತು ಒಂದು ಬಾಳೆಹಣ್ಣು ತಿಂದು, ಒಂದು ಪೋಟ ಹಾಲು ಕುಡಿದರೆ ದೇಹಕ್ಕೆ ತುಂಬಾ ಒಳ್ಳೆಯದು. ಭಾರತದ ಪ್ರಾಚೀನ ಔಷಧ ತಯಾರಿಕಾ ಪದ್ಧತಿಯಲ್ಲಿ

ಬಾಳೆಹಣ್ಣಿನಿಂದ ಅನೇಕ ಔಷಧಿಗಳನ್ನು ತಯಾರಿಸುತ್ತಿದ್ದರು. ಬಾಳೆಹಣ್ಣು ಸೇವನೆಯಿಂದ ಅನಾರೋಗ್ಯವನ್ನು ದೂರವಿರಿಸಬಹುದಲ್ಲದೆ ಶರೀರದಲ್ಲಿ ಸದಾ ಯೌವನ ಇರುವಂತೆ ಸಹಾಯ ಮಾಡುತ್ತೆ. ಬಾಳೆಹಣ್ಣು ಅಮೃತದ ಸಮಾನ. ಅದಕ್ಕಾಗಿಯೇ ಸ್ವರ್ಗದ ಹಣ್ಣೆಂದು ಅದು ಪ್ರಸಿದ್ಧಿ ಗಳಿಸಿದೆ. ಬೇರಾವುದೇ ಹಣ್ಣುಗಳಿಗಿಂತಲೂ ಬಾಳೆಹಣ್ಣು ದೇವರಿಗೂ ಅತ್ಯಂತ ಹೆಚ್ಚು ಪ್ರಿಯ. ದೇವರಿಗೆ ನೈವೇದ್ಯಕ್ಕಾಗಿ ತಿಹೆಚ್ಚು ಸಮರ್ಪಿತವಾಗಿರುವುದು ಬಾಳೆಹಣ್ಣು.

ಕಳಿತ (ತುಂಬಾ ಚೆನ್ನಾಗಿ ಹಣ್ಣಾದ) ಬಾಳೆಹಣ್ಣುಗಳನ್ನು ಗರ್ಭಕೋಶದ ತೊಂದರೆ ಇರುವ ಹೆಂಗಸರು ಸೇವಿಸಿದರೆ ಒಳ್ಳೆಯದು ಎಂದು ಹಳ್ಳಿಗರು ಹೇಳುತ್ತಾರೆ. ಜ್ವರಬಾಧೆಯಿಂದ ಬಳಲುತ್ತಿರುವವರು ಬೂದು ಬಾಳೆಹಣ್ಣನ್ನು ಸೇವಿಸಿದರೆ ಒಳಿತು. ಅದರ ಸೇವನೆ ಜ್ವರವನ್ನು ತಡೆಗಟ್ಟುತ್ತದೆ. ಬಾಳೆಹಣ್ಣಿನಲ್ಲಿ ಕಬ್ಬಿನಂಶ ಚೆನ್ನಾಗಿರುವುದರಿಂದ ಅನೀಮಿಯಾ ತೊಂದರೆಯಿಂದ ಬಳಲುತ್ತಿರುವವರು ದಿನಕ್ಕೆರಡು ಮೂರು ಬಾಳೆಹಣ್ಣು ತಿಂದರೆ ಶಕ್ತಿಶಾಲಿಗಳಾಗುತ್ತಾರೆ.

ಉಷ್ಣಬಾಧೆ, ಚರ್ಮದ ಉರಿಯಿಂದ ತೊಂದರೆಪಡುತ್ತಿರುವವರು ಪಚ್ಚಬಾಳೆಹಣ್ಣನ್ನು ಸೇವಿಸುವುದರಿಂದ ದೇಹ ತಂಪಾಗುತ್ತದೆ. ಬಾಳೆಹಣ್ಣನ್ನು ಚೆನ್ನಾಗಿ ಮಸೆದು ಉರಿಯುವ ಜಾಗಕ್ಕೆ ಹಚ್ಚುವುದರಿಂದಲೂ ಶಮನ ದೊರೆಯುತ್ತದೆ. ಬಾಯಿ ಹುಣ್ಣಿನಿಂದ ಬಾಧೆ ಪಡುವವರು ಮೊಸರಿನೊಂದಿಗೆ ಬಾಳೆಹಣ್ಣು ಕಿವುಚಿ ಸೇವಿಸುವುದರಿಂದ ನಿವಾರಣೆ ಆಗುತ್ತದೆ. ದಿನಕ್ಕೆರಡು ಬಾಳೆಹಣ್ಣು ಸೇವಿಸುವುದರಿಂದ ಬಿ.ಪಿ. ತಹಬಂದಿಗೆ ಬರುತ್ತದೆ. ಅಲ್ಲದೆ ಹೊಟ್ಟೆ ಸಂಬಂಧಿ ರೋಗಗಳು ಬಾರದಂತೆ ತಡೆಗಟ್ಟುತ್ತದೆ.

ತುಂಬಾ ಶೀತಬಾಧೆಯಿಂದಿರುವವರು ನೆಗಡಿಯಿಂದ ಸದಾ ಬಳಲುತ್ತಿರುವವರು ಪಚ್ಚಬಾಳೆಯನ್ನು ಸೇವಿಸದಿರುವುದೇ ಒಳಿತು. ಕಲ್ಲಂಬಾಳೆ ಸೇವನೆಯಿಂದ ಕೆಲವರಿಗೆ ಗಂಟಲು ನೋವು, ಜ್ವರ ಬರುವುದುಂಟು. ಇಂತಹವರು ಬೂದು ಬಾಳೆಹಣ್ಣು ಸೇವಿಸುವುದು ಉತ್ತಮ.

ಬಾಳೆಹಣ್ಣು ಸೇವನೆಯು ಶರೀರದ ಸುಕ್ಕನ್ನು ತಡೆಗಟ್ಟುತ್ತದೆ. ಶರೀರ ಸದಾಕಾಲ ತಾಜಾ ಆಗಿರುವಂತೆ ಸಹಕರಿಸುತ್ತದೆ. ಚಪಾತಿ, ರೊಟ್ಟಿಯೊಂದಿಗೆ ನಂಜಿಕೊಳ್ಳಲು ಮಸಾಲೆ ಪಲ್ಯಗಳ ಬದಲು ಬಾಳೆಹಣ್ಣನ್ನು ಬಳಸಿದರೆ ಹೆಚ್ಚು ಜಾಣರಾಗಿರುತ್ತೀರಿ. ಮೂಲವ್ಯಾಧಿ (ಪೈಲ್ಸ್) ತೊಂದರೆಯಿಂದ ನರಳುವವರಿಗಂತೂ ಬಾಳೆ ರಾಮಬಾಣ.

ಬಾಳೆಗಿಡವೂ ಕಲ್ಪವೃಕ್ಷದಂತೆಯೇ ಪ್ರತಿಭಾಗವೂ ಉಪಕಾರಿ. ಬಾಳೆ ಎಲೆಗಳಿಂದ ನಾನಾ ಉಪಯೋಗ ಪಡೆಯುವಂತೆಯೇ ದಿಂಡು, ಹೂವುಗಳನ್ನು ಕೂಡ ಬಳಸುತ್ತೇವೆ. ಪ್ರತಿದಿನ ಬಾಳೆಎಲೆಯ ಮೇಲೆ ತಿಂಡಿ, ಊಟ ಮಾಡುವುದರಿಂದ ಧಾರಾಳ ವಿಟಮಿನ್‌ಗಳು ದೊರೆಯುತ್ತವೆ.

ಮತ್ತೇಕೆ ತಡ, ಮನೆಯ ಹಿತ್ತಿಲಿನಲ್ಲೊಂದಿಷ್ಟು ಜಾಗವಿದ್ದರೆ ನೀವೂ ಒಂದು ಬಾಳೆಕಂದು ತಂದು ಹಾಕಿ. ವಿಶ್ವಮನ್ನಣೆ ಪಡೆಯುತ್ತಿರುವ ನಮ್ಮ 'ಸ್ವರ್ಗದ ಹಣ್ಣ'ನ್ನು ಧಾರಾಳವಾಗಿ ತಿನ್ನುತ್ತಾ ಆರೋಗ್ಯವಂತರಾಗಿ ನೂರ್ಕಾಲ ಬಾಳಿರಿ.



# ಬೆಂಗಳೂರಿನ ನಿರ್ಮಾತೃ ಕೆಂಪೇಗೌಡರು

**ಪ್ರೊ. ಬಿ. ನಾರಾಯಣಮ್ಮ**





ಶ್ರೀ ಮರಿಮಲ್ಲಯ್ಯ

ನಗರವನ್ನು ಸಿಂಗರಿಸಿ ಅವರನ್ನು ಸ್ವಾಗತಿಸಲಾಯಿತು. ಕೆಂಪೇಗೌಡರ ಕೀರ್ತಿ ಎಲ್ಲಾ ಕಡೆಗಳಿಗೂ ಹರಡಿತು.

ಸ್ವಲ್ಪ ಕಾಲಾನಂತರ, ಕೆಂಪನಂಜೇಗೌಡರು ತಮ್ಮ ಪತ್ನಿ ಕೆಂಪಮ್ಮನ ಸೋದರನ ಮಗಳಾದ ಚೆನ್ನಾಂಬೆಯನ್ನು ಮತ್ತು ತಮ್ಮ ಮಗ ಕೆಂಪೇಗೌಡರಿಗೆ ಕೊಟ್ಟು ವಿವಾಹವನ್ನು ವಿಜೃಂಭಣೆಯಿಂದ ನೆರವೇರಿಸಿದರು.

ಕ್ರಿ.ಶ. 1521ರಲ್ಲಿ ಕೆಂಪೇಗೌಡರಿಗೆ ಪಟ್ಟಾಭಿಷೇಕ ಮಹೋತ್ಸವಕ್ಕೆ ಅನೇಕ ಮಾಂಡಳಿಕರನ್ನು, ಸಾಮಂತರನ್ನು, ಮಹಾ ಮಾಂಡಲಿಕರನ್ನು, ಅನೇಕಾನೇಕ ಅತಿಥಿಗಳನ್ನೂ ಆಹ್ವಾನಿಸಿದ್ದರು. ಸಾಮ್ರಾಟ್ ಶ್ರೀಕೃಷ್ಣದೇವರಾಯರು ಅನೇಕ ಬಿರುದುಗಳನ್ನುಕಳುಹಿಸಿಕೊಟ್ಟಿದ್ದರು.

ಕೆಂಪೇಗೌಡರು ಧರ್ಮದಿಂದ ರಾಜ್ಯವಾಳಿದರು. ತಂದೆ ತಾತಂದಿರಂತೆ ಅನೇಕ ಕೆರೆಕಟ್ಟೆಗಳನ್ನು ಕಟ್ಟಿಸಿದರು. ಪ್ರಜೆಗಳ ಪ್ರೀತಿವಾತ್ಸಲ್ಯಗಳನ್ನು ಗಳಿಸಿದರು. ಕೆಂಪೇಗೌಡರ ಪತ್ನಿ ಚೆನ್ನಾಂಬಿಕೆಗೆ ಗಂಡುಮಗುವಾಯಿತು. ಮಗುವಿಗೆ ಇಮ್ಮಡಿ ಕೆಂಪೇಗೌಡನೆಂದು ನಾಮಕರಣ ಮಾಡಲಾಯಿತು. ಇಮ್ಮಡಿ ಕೆಂಪೇಗೌಡರನ್ನು ಗುರುಕುಲಕ್ಕೆ ವಿದ್ಯಾಭ್ಯಾಸಕ್ಕೆ ಕಳುಹಿಸಲಾಯಿತು. ಯುದ್ಧ ಕೌಶಲವನ್ನು ಆಡಳಿತ ವಿಧಾನವನ್ನು ಇತರ ಎಲ್ಲಾಕ್ಷೇತ್ರಗಳಲ್ಲಿ ಪಾಂಡಿತ್ಯವನ್ನೂ ಇಮ್ಮಡಿ ಕೆಂಪೇಗೌಡರು ಕಲಿತರು.

**ವಿಜಯನಗರ ಸಾಮ್ರಾಜ್ಯಕ್ಕೆ ಒದಗಿದ ಆಪತ್ತು:** ವಿಜಯನಗರಕ್ಕೆ ಅನೇಕ ಹಿತಶತ್ರುಗಳಿದ್ದರು. ರಾಜದ್ರೋಹಿಗಳು ಸಾಮ್ರಾಟ್ ಶ್ರೀಕೃಷ್ಣದೇವರಾಯರ ಮಗನಾದ ತಿರುಮಲ ರಾಯನನ್ನು ವಿಷ ಹಾಕಿ ಕೊಂದರು. ಇದರಿಂದ ಶ್ರೀಕೃಷ್ಣದೇವರಾಯರಿಗೆ ಆಘಾತವಾಯಿತು. ಅವರು ಹಾಸಿಗೆ ಹಿಡಿದರು. ಪುತ್ರಶೋಕದಲ್ಲಿ ಮರಣ ಹೊಂದಿದರು. ಈ ವಾರ್ತೆಯನ್ನು ಕೇಳಿದ ಕೆಂಪೇಗೌಡರು ಹಾಸಿಗೆ ಹಿಡಿದರು. ಅಚ್ಯುತರಾಯರು ವಿಜಯನಗರದ ಸಾಮ್ರಾಟರಾದರು. ಶ್ರೀಕೃಷ್ಣದೇವರಾಯರ ಮಗಳು ತಿರುಮಲಾಂಬೆಯ ಪತಿ ಅಳಿಯ ರಾಮರಾಯರು ಅಚ್ಯುತರಾಯರಿಗೆ ನೆರವಾಗಿ ಸಾಮ್ರಾಜ್ಯ ರಕ್ಷಣೆಗೆ ನಿಂತರು.

ಕೆಂಪೇಗೌಡರು ಚೇತರಿಸಿಕೊಂಡು ರಾಜ್ಯಭಾರದಲ್ಲಿ ಆಸಕ್ತಿ ವಹಿಸತೊಡಗಿದರು.

**ಇಮ್ಮಡಿ ಕೆಂಪೇಗೌಡರ ವಿವಾಹ:** ಕೆಂಪೇಗೌಡರು ಪತ್ನಿ ಚೆನ್ನಾಂಬೆಯ ಜೊತೆಯಲ್ಲಿ ಶಿವರಾತ್ರಿಯಂದು ಅಲಸೂರಿನ ಸೋಮೇಶ್ವರ ದೇವಾಲಯಕ್ಕೆ ಹೋಗಿದ್ದರು. ಅಲ್ಲಿಗೆ ಕೋರಮಂಗಲದ ಸೊಣ್ಣೇಗೌಡರ ಮೊಮ್ಮಗಳಾದ ಲಕ್ಷ್ಮಿ ಸಹ ಬಂದಿದ್ದಳು. ಆಕೆಯ ಸೌಂದರ್ಯ ಹಾಗೂ ದೈವಭಕ್ತಿಯನ್ನು ಮೆಚ್ಚಿದ ಕೆಂಪೇಗೌಡರು ಅರ್ಚಕರಿಂದ ಆಕೆಯ ಬಗ್ಗೆ ವಿವರಗಳನ್ನು ಸಂಗ್ರಹಿಸಿದರು. ಆಕೆಯೇ ತಮ್ಮ ಮಗ ಇಮ್ಮಡಿ ಕೆಂಪೇಗೌಡರಿಗೆ ತಕ್ಕ ಹೆಣ್ಣು ಎಂದು ದಂಪತಿಗಳು ನಿಶ್ಚಯಿಸಿದರು. ಲಕ್ಷ್ಮಿ ಹಾಗೂ ಇಮ್ಮಡಿ ಕೆಂಪೇಗೌಡರ ಮದುವೆಯನ್ನು ವಿಜೃಂಭಣೆಯಿಂದ ನೆರವೇರಿಸಿದರು. ಇಮ್ಮಡಿ ಕೆಂಪೇಗೌಡರು, ತಮ್ಮ ಪತ್ನಿ ಲಕ್ಷ್ಮಿಯನ್ನು ಒಂದು ದಿನ ಬೆಟ್ಟಕ್ಕೆ ಕರೆದೊಯ್ದರು. ಅಲ್ಲಿ ತಮ್ಮ ವಂಶದ ಅಭ್ಯುದಯಕ್ಕಾಗಿ ತಾನು ಎಂತಹುದೇ ತ್ಯಾಗಕ್ಕೂ ಸಿದ್ಧಳಾಗಬೇಕೆಂದು ಮನದಲ್ಲಿ ನಿಶ್ಚಯಿಸುತ್ತಾಳೆ. ಲಕ್ಷ್ಮಿಗೆ ಗಂಡುಮಗುವಾಗುತ್ತದೆ. ಮುಮ್ಮಡಿ ಕೆಂಪೇಗೌಡ ಎಂದು ನಾಮಕರಣ ಮಾಡಲಾಗುತ್ತದೆ.

**ಕೆಂಪೇಗೌಡರು ಪಟ್ಟಾಭಿಷಿಕ್ತರಾದಾಗಿನ ಪರಿಸ್ಥಿತಿ:** ಕೆಂಪೇಗೌಡರು ರಾಜ್ಯಾಡಳಿತದ ಸೂತ್ರವನ್ನು ಹಿಡಿದಾಗ ರಾಜ್ಯದ ಪರಿಸ್ಥಿತಿ ಸರಿಯಿರಲಿಲ್ಲ. ಎಲ್ಲೆಲ್ಲೂ ಶತ್ರುಗಳಿದ್ದರು. ವಿಜಯನಗರದ ಗಡಿಭಾಗಗಳಲ್ಲಿ ಬಹಮನಿ ಸುಲ್ತಾನರ ಕಾಟವಿದ್ದಿತು. ಸಾಲದ್ದಕ್ಕೆ ಪಾಳೆಯಗಾರರ ಉಪಟಳವಿದ್ದಿತು. ಇದೆಲ್ಲವನ್ನೂ ಅರಿತ ಕೆಂಪೇಗೌಡರು ನೆರೆರಾಜ್ಯಗಳ ಪಾಳೆಯಗಾರರೊಡನೆ ಎಚ್ಚರದಿಂದಿದ್ದರು. ನಮ್ಮ ನಾಡನ್ನು ಬಹಮನಿ ಸುಲ್ತಾನರು ಆಕ್ರಮಿಸಲು ಸಂಚು ಮಾಡುತ್ತಿದ್ದಾರೆ. ನಮ್ಮ ನಾಡಿನ ರಕ್ಷಣೆ ಮುಖ್ಯ ಎಂದು ಭಾವಿಸಿ ನೆರೆ ರಾಜ್ಯಗಳ ಪಾಳೆಯಗಾರರಿಗೆ ಈ ರೀತಿ ಪತ್ರಗಳನ್ನು ಬರೆದರು.

‘‘ನಮ್ಮ ಸಾಮ್ರಾಜ್ಯದ ಗಡಿಗಳನ್ನು ನುಂಗಲು ಅನ್ಯಧರ್ಮೀಯ ಶತ್ರುಗಳು ಬಾಯಿ ತೆರೆದು ನಿಂತಿದ್ದಾರೆ. ನಮ್ಮ ನಮ್ಮಲ್ಲಿ ಜಗಳ ಬೇಡ. ಅನೈತಿಕ ಮತದಿಂದ ನಾವೆಲ್ಲಾ ಶತ್ರುಗಳ ಪಾಲಾಗುತ್ತೇವೆ’’ ಈ ರೀತಿ ಕೆಂಪೇಗೌಡರು ವ್ಯವಹಾರ ಕುಶಲತೆಯನ್ನು ಪ್ರದರ್ಶಿಸಿದರು.

ಪಾಳೆಯಗಾರರು ಕೆಂಪೇಗೌಡರ ಸಲಹೆಯನ್ನು ಸ್ವೀಕರಿಸದೆ, ಕೆಂಪೇಗೌಡರ ಏಳಿಗೆಯ ಬಗ್ಗೆ ಅಸೂಯೆಯನ್ನು ಹೊಂದಿ, ಕೆಂಪೇಗೌಡರನ್ನೇ ತಮ್ಮ ಶತ್ರುವೆಂದು ಭಾವಿಸಿದರು. ಅವರಲ್ಲಿ ಚನ್ನಪಟ್ಟಣದ ಪಾಳೆಯಗಾರ ಜಗದೇವರಾಯ ಪ್ರಮುಖನಾಗಿದ್ದನು. ಈ ಪಾಳೆಯಗಾರರಿಂದ ಯಾವ ಗಳಿಗೆಯಲ್ಲಾದರೂ ಆಪತ್ತು ಒದಗಬಹುದೆಂದು ಕೆಂಪೇಗೌಡರು ಭಾವಿಸಿದರು. ಅದಕ್ಕಾಗಿ ಸೈನ್ಯವನ್ನು ಬಲಪಡಿಸತೊಡಗಿದರು. ಈಗಿನ ರಾಮನಗರಕ್ಕೆ ಮೂರು ಮೈಲಿ ದೂರದಲ್ಲಿದ್ದ ರಾಮಗಿರಿಯಲ್ಲಿ ಮದ್ದುಗುಂಡಿನ ಕಾರ್ಖಾನೆಯನ್ನು ಸ್ಥಾಪಿಸಿ, ಅಲ್ಲಿ ಯುದ್ಧೋಪಕರಣಗಳನ್ನು ತಯಾರಿಸಿದರು. ಈಗಲೂ ರಾಮಗಿರಿಯಲ್ಲಿ ಬಂಡೆಯೊಂದನ್ನು ಕಾರ್ಖಾನೆಯ ಬಂಡೆ ಎಂದು ಕರೆಯುತ್ತಾರೆ. ಹುತ್ರಿದುರ್ಗ, ರಾಮಗಿರಿ ಮುಂತಾದ ಕಡೆಗಳಲ್ಲಿ ಸೈನ್ಯವನ್ನಿಟ್ಟು ರಾಜ್ಯದ ರಕ್ಷಣೆಗೆ ಹೆಚ್ಚಿನ ಗಮನ ಹರಿಸಿದರು.

*(ಮುಂದುವರೆಯುವುದು)*





# ಭೂಲೋಕದಲ್ಲಿ ಕಾಮಧೇನು

ಬಹಳ ಹಿಂದಿನ ಮಾತು. ಆಗ ಭೂಮಿಯ ಮೇಲೆ ದನಗಿರಲಿಲ್ಲ. ಮನುಷ್ಯ ನೆಲವನ್ನು ತಾನೇ ನೊಗ ಎಳೆದು ಉಳುತ್ತಿದ್ದ ಕಾಲ. ಅದೇ ಸಮಯದಲ್ಲಿ 2 – 3 ವರ್ಷ ಮಳೆ ಬರದೆ, ಬೆಳೆ ಇಲ್ಲದಂತಾಗಿ ಭೂಲೋಕದಲ್ಲಿ ಕ್ಷಾಮ ತಲೆದೋರಿತು. ಜನರೆಲ್ಲಾ ಸೇರಿ ಹೋಮ, ಯಜ್ಞ, ಅಭಿಷೇಕಗಳನ್ನು ಮಾಡಿ ದೇವೇಂದ್ರನನ್ನು ಪ್ರಾರ್ಥಿಸಿದರು. ಅವರ ಬಗ್ಗೆ ಮರುಕ ಪಟ್ಟ ದೇವೇಂದ್ರನು ತನ್ನ ಆಸ್ಥಾನದಲ್ಲಿದ್ದ ಕಾಮಧೇನುವನ್ನು ಕರೆದು ‘ಭೂಲೋಕಕ್ಕೆ ಹೋಗಿ ಅಲ್ಲಿನ ಜನರಿಗೆ ಮೂರು ಹೊತ್ತು ದುಡಿದು, ಒಂದು ಹೊತ್ತು ಮಾತ್ರ ಚೆನ್ನಾಗಿ ಊಟ ಮಾಡಬೇಕೆಂದು ತಿಳಿಸು. ಹಾಗೆ ಮಾಡಿದರೆ ಮಾತ್ರ ಅವರ ಪಾಪವೆಲ್ಲಾ ಕಳೆದು ಕ್ಷಾಮ ದೂರವಾಗಿ ನೆಮ್ಮದಿಯ ಜೀವನ ನಡೆಸಬಹುದೆಂದು ತಿಳಿಸಿ,ಹಿಂದಿರುಗಿ ಬಾ’ ಎಂದು ಹೇಳಿ ಕಾಮಧೇನುವನ್ನು ಭೂಲೋಕಕ್ಕೆ ಕಳುಹಿಸಿಕೊಟ್ಟನು.

ದೇವೇಂದ್ರನ ಆಜ್ಞೆಯಂತೆ ಭೂಲೋಕಕ್ಕೆ ಬಂದ ಕಾಮಧೇನುವನ್ನು ಜನರು ದೇವದೂತನೆಂಬ ಕಾರಣಕ್ಕಾಗಿ ವಿಜೃಂಭಣೆಯಿಂದ ಸ್ವಾಗತಿಸಿ ಸತ್ಕರಿಸಿದರು. ಇದರಿಂದ ಮೈಮರೆತ ಕಾಮಧೇನುವು ‘ದೇವೇಂದ್ರನು ನಿಮಗೆಲ್ಲಾ ಸಂದೇಶವನ್ನು ಕಳಿಸಿದ್ದಾನೆ. ನೀವೆಲ್ಲಾ ದಿನಕ್ಕೆ ಒಂದು ಹೊತ್ತು ಮಾತ್ರ ದುಡಿದು, ಮೂರು ಹೊತ್ತು ಚೆನ್ನಾಗಿ ಊಟ ಮಾಡಬೇಕಂತೆ’ ಎಂದು ತಿಳಿಸಿತು.ಇದರಿಂದ ಹರ್ಷಿತರಾದ ಜನರು ಹಿರಿಹಿರಿ ಹಿಗ್ಗಿದರು. ಪುನಃ ಜನರಿಂದ ಅದ್ದೂರಿಯಾಗಿ ಬೀಳ್ಕೊಂಡ ಕಾಮಧೇನುವು ಇಂದ್ರಲೋಕಕ್ಕೆ ಆಗಮಿಸಿತು. ಆಗ ಕಾಮಧೇನುವಿನ ನಡೆಯಿಂದ ಕುಪಿತನಾದ ಕೇವೇಂದ್ರನು ‘ನಾನು ಹೇಳಿದ್ದೇನು, ನೀನು ಮಾಡಿದ್ದೇನು? ಜನರು ಮೂರು ಹೊತ್ತು ಉಣ್ಣಲು ಅವರು ಒಂದು ಹೊತ್ತು ದುಡಿದರೆ ಸಾಕಾಗುತ್ತದೆಯೇ? ಒಂದೇ ಹೊತ್ತಿನಲ್ಲಿ ಮೂರು ಹೊತ್ತಿಗಾಗುವಷ್ಟು ಸಂಪಾದಿಸಲು ಅವರೊಬ್ಬರಿಂದ ಸಾಧ್ಯವೇ? ನೀನು ಮಾಡಿದ ತಪ್ಪಿಗಾಗಿ ನೀನೂ ಭೂಲೋಕಕ್ಕೆ ಹೋಗಿ ಅವರೊಂದಿಗೆ ಇದ್ದು, ಅವರ ದುಡಿಮೆಯಲ್ಲಿ ಸಹಾಯ ಮಾಡು. ಅವರು ಕೂತು ಉಣ್ಣುವಷ್ಟು ಶ್ರೀಮಂತರಾದ ಮೇಲೆ ನೀನು ಪುನಃ ದೇವಲೋಕಕ್ಕೆ ಬಾ. ಅಲ್ಲಿಯವರೆಗೂ ಭೂಲೋಕದಲ್ಲಿ ರೈತನೊಂದಿಗೇ ಜೀವಿಸು. ನಿನ್ನ ಅತೀ ಮಾತುಗಳಿಂದಲೇ ಇಷ್ಟೆಲ್ಲಾ ಪಾಡಾಯಿತು. ಆದ್ದರಿಂದ ಇನ್ನು ಮುಂದೆ ನೀನು ಮಾತನಾಡದಂತಾಗಲಿ’ ಎಂದು ಶಾಪ ಕೊಟ್ಟನು. ಅಂದಿನಿಂದತಾನು ಮಾಡಿದ ಸಣ್ಣ ತಪ್ಪಿಗಾಗಿ ದನ, ಹಸುಗಳೆಲ್ಲಾ ಭೂಲೋಕದಲ್ಲಿ ಮಾನವರೊಂದಿಗೆ ದುಡಿಯುವಂತಾಯಿತಂತೆ. *–ಪ.ನಾ. ಹಳ್ಳಿ, ಹರೀಶ್ ಕುಮಾರ್*

**ತರ್ಲೆ ಮಾತು**

ಹೆಂಡತಿ: ನಿಮ್ಮ ಸ್ನೇಹಿತ ಆ ಮೂರ್ಖ ಹುಡುಗೀನ ಮದುವೆಯಾಗುವುದಕ್ಕೆ ಹೊರಟಿದ್ದಾನೆ. ನೀವು ಅವನಿಗೆ ಹೇಳಿ ಅದನ್ನು ತಪ್ಪಿಸಬಾರದಾ?

ಗಂಡ: ನಾನು ಏಕೆ ಹೇಳಲಿ? ಅವನೇನು ನನಗೆ ಹೇಳಿ ನನ್ನ ಮದುವೇನ ನಿಲ್ಲಿಸಿದ್ದನಾ?

# ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ

**ಸುಜಾತ ರಾಮನ್, ಬೆಂಗಳೂರು**

*ಭೀಮನ ಅಮಾವಾಸ್ಯೆಯಂದು ಗಂಡನ ಪೂಜೆ ಮಾಡಬೇಬೇಕಾ ಜೋಯಿಸರೇ?*

– ಪ್ರತಿನಿತ್ಯವೂ 'ಸರಿಯಾಗಿ ಪೂಜೆ' ಮಾಡುತ್ತಿದ್ದರೆ ಒಂದು ದಿನ ಮಿಸ್ ಆದರೂ ಪರವಾಗಿಲ್ಲ.

**ಹನುಮಂತಪ್ಪ, ಬಳ್ಳಾರಿ**

*ಮಂಗನಿಂದ ಮಾನವ, ಮುಂದೇನು ಸಾರ್?*

– ವೆರಿ ವೆರಿ ಸಿಂಪಲ್, ಮಾವನ ಮಗಳಿಂದ ಮಂಗ ಅಷ್ಟೇ.

**ಭೀಮಪ್ಪ, ಹೊಸಪೇಟೆ**

*ನೋಡಿ ತಿಳಿದುಕೊಳ್ಳುವುದಕ್ಕೂ, ಮಾಡಿ ತಿಳಿದುಕೊಳ್ಳುವುದಕ್ಕೂ, ಅನುಭವಿಸಿ ತಿಳಿದುಕೊಳ್ಳುವುದಕ್ಕೂ ವ್ಯತ್ಯಾಸ?*

– ಮೊದಲನೆಯದು ವಿಚಾರ, ಎರಡನೆಯದು ಆಚಾರ, ಕೊನೆಯದು ಗ್ರಹಚಾರ.

**ನಾಗಭೂಷಣ, ಮೈಸೂರು**

*ಅಧಿಕಾರ ಒಳ್ಳೆಯದೋ, ಅಹಂಕಾರ ಒಳ್ಳೆಯದೋ?*

–ಅಧಿಕಾರದಲ್ಲಿ ಅಹಂಕಾರ, ಅಹಂಕಾರಿಗೆ ಅಧಿಕಾರ ಇರದಿದ್ದರೆ ಒಳ್ಳೆಯದು.

**ಮಂದಿರಾ, ಕಾರವಾರ**

*ಒಂದೇ ಸಾರಿ ಎಷ್ಟು ಪ್ರಶ್ನೆಯನ್ನಾದರೂ ಕೇಳಬಹುದೇ ಗುರುಗಳೇ?*

–ಕೇಳಬಹುದು. ಆದರೆ ಒಂದು ಪ್ರಶ್ನೆಗೆ ಮಾತ್ರ ಉತ್ತರ ಸಿಗುತ್ತೆ.

**ಸಂತೋಷ್, ತುಮಕೂರು**

*ತುಂಡು ಬಟ್ಟೆ ಸಾಕು ನನ್ನ ಮಾನ ಮುಚ್ಚೋಕೆ ಅಂತಾಳಲ್ಲಾ ನನ್ನ ಸ್ನೇಹಿತೆ, ನಾನೇನು ಮಾಡಲಿ?*

–ಅಬ್ಬಬ್ಬ ಅಷ್ಟಾದರೂ ಅರಿವೆ ಬೇಕೆಂಬ ಅರಿವು ಇರುವುದರಿಂದ ಖುಷಿ ಪಡಿ.

**ಶ್ರೀನಿವಾಸ್, ಶಿವಮೊಗ್ಗ**

*ಕೆಲವು ಹುಡುಗಿಯರು ಮೊಬೈಲ್ ಇಲ್ಲದಿದ್ದರೆ ಬದುಕೇ ನಶ್ವರ ಅಂತಾರಲ್ಲ ನಿಜವೇ?*

–ಬದುಕು ನಶ್ವರ ಅಲ್ಲ, ನಸ್ವರ ಅಷ್ಟೆ.

**ನಾರಾಯಣರಾವ್, ಹಾಸನ**

*ಕರ್ನಾಟಕದಲ್ಲಿ ಆಡಳಿತ ಪಕ್ಷ ಒಂದಿದ್ದರೆ, ಕೇಂದ್ರದಲ್ಲಿ ಇನ್ನೊಂದಿರುತ್ತದಲ್ಲಾ, ಇದು ನಮ್ಮ ದೌರ್ಭಾಗ್ಯವೇ?*

–ಆಳುವವರ ಸೌಭಾಗ್ಯ. ಎಲ್ಲಕ್ಕೂ ಪರಸ್ಪರ ಗೂಬೆ ಕೂರಿಸಿ ಕಾಲ ಕಳೆಯಲು ಸೂಕ್ತ.

**ಚನ್ನಕೇಶವ, ಚಿಕ್ಕಮಗಳೂರು**

*ಕುಡುಕಿಯಾದ ಪತ್ನಿ ಕುಡುಕನಲ್ಲದ ಪತಿಗೆ ಪ್ರತಿದಿನ ಚೆನ್ನಾಗಿ ಬಡಿದು ಹಾಕುತ್ತಿದ್ದರೆ?*

–ಸ್ತ್ರೀ ಸಮಾನತಾವಾದಿಗಳು ಖುಷಿಯಾಗಿರುತ್ತಾರೆ.

**ಗುಂಡಪ್ಪ, ಕುಶಾಲನಗರ**

*ಜನಸಾಮಾನ್ಯನಿಗೂ, ಸಾಮಾನ್ಯ ಜನಕ್ಕೂ ವ್ಯತ್ಯಾಸವಿದೆಯೇ?*

–ಮತ ಬೀಳುವ ಮುನ್ನ ಜನ ಸಾಮಾನ್ಯ, ಹಾಕಿದ ನಂತರ ಸಾಮಾನ್ಯ ಜನ.

**ಪವಿತ್ರ, ಮಂಡ್ಯ**

*ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕುಡಿಯುವುದೇಕೆ?*

–ಅಪ್ಪಟ ಹಾಲು ಅಲ್ಲವಾದ್ದರಿಂದ ಮನಸ್ಸಿಗೆ ಬೇಜಾರಾಗುತ್ತಲ್ಲವೆಂದಿರಬೇಕು.



# ಯಮಲೋಕದಲ್ಲಿ ಪತ್ರಕರ್ತ



(ಹಿಂದಿನ ಸಂಚಿಕೆಯಿಂದ)

ರಾಮಸ್ವಾಮಿ: ತನ್ನ ಕಾರನ್ನು ತೆಗೆದುಕೊಂಡು ಸುಕನ್ಯಾ ಲಾಡ್ಜ್‌ಗೆ ಬಂದ. ನಾರಾಯಣನನ್ನು ನೋಡಿ ನಾನು ಕಾರ್ ತಂದು ನಿಲ್ಲಿಸಿದ್ದೇನೆ. ನೀವು ಯಾವಾಗ ಬೇಕಾದರೂ ಹೋಗಬಹುದು. ಕೂಗಿದ ತಕ್ಷಣ ಬರ್ತೀನಿ. ಕಾರಿಗೆ ಇಂಧನವನ್ನು ಹಾಕಿಸಿದ್ದೀನಿ. ತಕ್ಷಣ ಹೊರಡಲು ಸಿದ್ಧವಾಗಿದೆ.

ನಾರದ: ನಾರಾಯಣ ನಾರಾಯಣ ನಾರಾಯಣ ಅಂತ ನಾರಾಯಣನ ಸ್ಮರಣೆ ಮಾಡುತ್ತ ಆಕಾಶ ಮಾರ್ಗವಾಗಿ ಬರುತ್ತಿದ್ದ. ಮಾರ್ಗಮಧ್ಯದಲ್ಲಿ ಎಡವಿದಂತಾಯಿತು. ಛೆ ಬಂಡೆಗಳು ಬಿದ್ದಿದೆಯಲ್ಲ. ಎರಡು ಭಯಂಕರವಾದ ದೈತ್ಯಾಕಾರದ ಬಂಡೆಗಳನ್ನು ನೋಡಿ ಬೆಚ್ಚಿ ಬೆರಗಾದ. ಕಿಟಾರ್ ಎಂದು ಅಯ್ಯೋ ಅಯ್ಯಯ್ಯೋ ಎಂದು ಚೀರಿದ.

ಯಮರಾಜನ ಕೋಣ: ಪೂಜ್ಯರಿಗೆ ನಮಸ್ಕರಿಸುವೆ ಎಂದಿತು.

ನಾರದ: ಅಯ್ಯಾ ಮಹಾನುಭಾವ ಕಲ್ಲುಬಂಡೆಯಂತೆ ಬಿದ್ದಿದ್ದರೆ ನನಗೇನು ಅರ್ಥವಾಗಬೇಕ. ನಿನ್ನ ಪಕ್ಕದಲ್ಲಿರುವ ಈ ಮಹಾಶಯರಾರು? ನಗೆಯ ಹಾಸ್ಯದಿಂದ ಕೇಳಿದನು.

ಎಮ್ಮೆಕೋಣ: ತನ್ನ ಧ್ವನಿಯಲ್ಲಿ ಪೂಜ್ಯರೇ, ಯಮಪುರಿಯ ಚಕ್ರವರ್ತಿಯಾದ ಯಮರಾಜನೆಂದಿತು.

ನಾರದ: ಮೆಲ್ಲಗೆ ಯಮರಾಜರೇ ಏಳಿ... ಮೆಲ್ಲಗೇಳಿ ಎಂದು ಎಬ್ಬಿಸಿ ಕುಳ್ಳಿರಿಸಿದ.

ಯಮ: ನಾರದರೆ ಇಂದ್ರಲೋಕದಲ್ಲಿ ಮಲಗಿದ್ದೆ. ಇಲ್ಲಿಗೆ ಹೇಗೆ ಬಂದೆ ಎಂದು ಕೇಳಿದ.

ನಾರದ: ಯಮರಾಜ ಇಂದ್ರಲೋಕದಲ್ಲಿ ಇಂದ್ರನು ನಿನಗೆ ಜಾಡಿಸಿ ಒದ್ದ. ಅದಕ್ಕೆ ಮಾರ್ಗಮಧ್ಯದಲ್ಲಿ ಬಂದು ಬಿದ್ದೆ. ಆದರೆ ನಾನು ನಿನ್ನ ಕುಳ್ಳಿರಿಸಿದೆ.

ಯಮರಾಜ: ಯಾಕಯ್ಯ ಹೀಗೆಲ್ಲಾ ವ್ಯರ್ತವಾಗಿ ಕಾಲ ಕಳೀತೀಯಾ ಎಂದು ನಾರದರನ್ನ ಕೇಳಿದ್ರು.

ನಾರದ: ತಬ್ಬಿಬ್ಬಾಗಿ ಚಿತ್ರಗುಪ್ತರೆ, ಕುಡಿದು ಗಬ್ಬಾಗಿ ಬಿದ್ದಿರುವ ಯಮನಿಗೆ ಒದೀರಿ ಬನ್ನಿ ಎಂದು ನಾರದರು ಯಮನನ್ನು ಒದ್ದೇ ಬಿಟ್ಟರು. ನಾರದರು ಒದ್ದ ಏಟಿಗೆ ಯಮಪುರಿಯ ಬಾಗಿಲಿಗೆ ಬಂದು ಬಿದ್ದ ಯಮ.

ಯಮ: ಅಯ್ಯಮ್ಮ ನಾರದ ಒದ್ದ ಏಟಿಗೆ ಇಲ್ಲಿ ಬಂದು ಬಿದ್ದೆನಲ್ಲ. ಇನ್ನು ಬ್ರಹ್ಮ ಒದ್ದಿದ್ದರೆ ಎಲ್ಲಿ ಬೀಳುತ್ತಿದ್ದೆನೋ ಪುಳಿಚಾರ್ ಕತಿಂದು ಹೀಗಾದ್ರೆ ಮಾಂಸಮಡ್ಡಿ ತಿಂದ್ಬಿಟ್ರೆ...!

ಯಮಪುರಿ: ಕಾವಲುಗಾರರು ಪ್ರಭು ಏನಿದು ರೋಜರ್ ಬಿನ್ನಿ ಬೌಲಿಂಗ್‌ಗೆ ಕಪಿಲ್‌ದೇವ್ ಸಿಕ್ಸರ್ ಬಾರಿಸಿದ ಹಾಗೆ ಇಲ್ಲಿ ಬಂದು ಬಿದ್ದಿದ್ದೀರಲ್ಲ. ಕಾವಲುಗಾರರಾದ ನಾವು ನಿಮ್ಮನ್ನು ಕ್ಯಾಚ್ ಹಿಡಿಯಲು ಆಗಲಿಲ್ಲವಲ್ಲ. ಯಮರಾಜ ನಿಮ್ಮನ್ನು ರಕ್ಷಿಸದಿದ್ದ ಮೇಲೆ ನಮಗೇಕೆ ಬೇಕು ಇಂದೇ ನಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡ್ತೀವಿ ಸ್ವೀಕರಿಸಿ.

ಯಮ: ಅಯ್ಯಾ ಕಾವಲುಗಾರರೆ, ನನ್ನನ್ನು ಮೊದಲು ಒಳಗೆ ಕರೆದುಕೊಂಡು ಹೋಗಿ,

ಆಮೇಲೆ ಮಾತನಾಡೋಣ. ಯಾರಾದ್ರೂ ನೋಡಿದ್ರೆ ರಾಜಕೀಯ ಬಣ್ಣ ಕಟ್ತಾರೆ.

ಕಾವಲುಗಾರ: ಯಮರಾಜ ಹಾಗೆಯೇ ಆಗಲಿ ಎಂದು ಒಳಗೆ ಕರೆದುಕೊಂಡು ಹೋದರು.

ಪತ್ರಕರ್ತ: ರಾಮಸಿಂಹಯ್ಯ, ಓಹೋಹೋ... ಯಮಧರ್ಮ ರಾಜ ಬರಬೇಕು. ನಾರದರು ನಿಮ್ಮನ್ನು ಒದ್ರಂತೆ. ಒದ್ದ ಏಟಿಗೆ ಇಲ್ಲಿ ಬಂದು ಬಿದ್ದಿರಿ ಹೌದೆ.

ಯಮರಾಜ: ರಾಮಸಿಂಹಯ್ಯನವರೆ ಮಾತನಾಡಬೇಡಿ, ಒಳಗೆ ಬನ್ನಿ ನನ್ನ ಮಾನ ಮರ್ಯಾದೆ ಹಾಳಾಗುತ್ತೆ.

ರಾಮಸಿಂಹಯ್ಯ: ನನ್ಮಗ್ನೆ ಮರ್ಯಾದೆ ಇದ್ರೆ ತಾನೆ ಸಿನಿಮಾ ತಾರೆ ಮೈ ಉಜ್ಜಿರೋ ವಿಮ್ ಸಾಬೂನು ಹಾಕಿ ಉಜ್ಜಿದರೂ ಮರ್ಯಾದೆ ಬರೋಲ್ಲ. ಲಕ್ಸ್ ಹಾಕಿದ್ರೆ ಲಕ್ಸ್ ಸಾಬೂನು ಲುಕ್ ಹೋಗಿ ಕಪ್ಪಾಗಿ ಬಿಡುತ್ತದೆ. ಗೊಣಗುತ್ತಾ ಮಹಾಪ್ರಭು ಬೆಡ್ ಮೇಲೆ ಮಲಗಿಕೊಳ್ಳಿ ಎಂದನು.

ಯಮ: ರಾಮಸಿಂಹಯ್ಯನವರೆ ಏಕೋ ಏನೋ ನನ್ನ ಗ್ರಹಚಾರ ಹದಗೆಟ್ಟಿದೆ. ಇದಕ್ಕೆ ಪರಿಹಾರವಿದೆಯೆ?

ರಾಮಸಿಂಹಯ್ಯ: ಹಲ್ಕ ನನ್ಮಗ್ನೆ ಪ್ರೆಸ್‌ನೋರ್ನ ಎದುರು ಹಾಕಿಕೊಂಡ್ರೆ ಕುಡಿಯೋಕೆ ನೀರು ಸಿಗೋಕಿಲ್ಲ ಗೊತ್ತಾಯ್ತೆ. ರೇಷ್ಮೆ ಮಂತ್ರಿ ಗೋವಿಂದಪ್ಪ ಪತ್ರಿಕೆ ಅಂದ್ರೆ ಅಲರ್ಜಿ ಅಂದ್ರಂತೆ. ಇವರಿಗೆ ಗ್ರಹಚಾರ ಕಾದಿದೆ. ಐದು ವರ್ಷದಿಂದ ಅಧಿಕಾರವಿರ್ಲಿಲ್ಲ. ಪೇಪರ್‌ನೋರು ಅಧಿಕಾರ ಕೊಡ್ಸಿದ್ರು. ಅಧಿಕಾರದ ಅಮಲಿನ ಪತ್ರಿಕೆ ಅಂದ್ರೆ ಅಷ್ಟು ಕೀಳಾಗಿದೆ ಎಂದು ತಿಳ್ಕೊಂಡಿದ್ರೆ ತಪ್ಪು ರಾಮಸಿಂಹಯ್ಯ ಗೋವಿಂದಪ್ಪನಿಗೆ ಎಚ್ಚರಿಸಿದ ಹಾಗೆ ಯಮರಾಜನನ್ನು ಎಚ್ಚರಿಸಿದ.

ಯಮ: ಚಿತ್ರಗುಪ್ತರೇ ನನ್ನ ಬಾಧೆಯನ್ನು ನೋಡಿದಿರಾ, ನೀವು ನನ್ನನ್ನು ಕ್ಷಮಿಸಿ, ನಿಮ್ಮ ರಾಜೀನಾಮೆ ವಾಪಸ್ ಪಡೆದು ಅಧಿಕಾರದಲ್ಲಿ ಮುಂದುವರಿಯಿರಿ ಎಂದು ಕನವರಿಸಿದ.

ಪತ್ರಕರ್ತ ರಾಮಸಿಂಹಯ್ಯ: ಯಮರಾಜ ಚಿತ್ರಗುಪ್ತ ಇನ್ನೂ ಇಲ್ಲ... ಬಂದಿಲ್ಲ. ಇರುವುದು ಗೊತ್ತಿಲ್ಲ. ಒಟ್ಟಿನಲ್ಲಿಲ್ಲ. ಭೂಲೋಕದ ಪ್ರಕಾರ ಚಿತ್ರಗುಪ್ತನಿಲ್ಲ?

ಯಮ: ಗಾಬರಿಯಾಗಿ ಚಿತ್ರಗುಪ್ತರೇ ನಿಲ್ಲಿ ಹೋಗಬೇಡಿ. ನನ್ನ ಮಾತು ಕೇಳಿ ಹೋಗಬೇಡಿ. ಅಯ್ಯೋ ಹೊರಟೇಹೋದರಲ್ಲ.

ಚಿತ್ರಗುಪ್ತ: ಮೇನೇಜರ್ ನಾರಾಯಣ್, ನಮ್ಮ ಪುಷ್ಪಕ ವಿಮಾನ ಸಿದ್ಧವಾಗಿದೆಯೇ. ನನ್ನ ಜೊತೆ ಹೊರಡಲು ನೀವು ಸಿದ್ಧರಾಗಿ ಪುಷ್ಪಕ ವಿಮಾನಚಾಲಕ ಅಮೀನ್ ಡ್ರೈವರ್ ಸಿದ್ಧವಾಗಿದ್ದಾನಾ ಎಂದು ಕೇಳಿದರು.

ನಾರಾಯಣ: ಓಹೋ ಕಾರು ಸಿದ್ಧವಾಗಿದೆ. ಡ್ರೈವರ್ ಬನ್ನಿ ಅಂದ. ಕಾರು ಬಂದು ನಿಂತಿತು. ಇಬ್ಬರೂ ಒಳಗೆ ಕುಳಿತರು. ಕಾರಿನ ಚಾಲಕ ರಾಮಸ್ವಾಮಿ ಕಾರನ್ನು ಸ್ಟಾರ್ಟ್ ಮಾಡಿದ. ಕಾರು ಚಲಿಸಿತು.

ರಮ್ಯ: ತಂದೆಗೆ ಊಟವನ್ನು ಕೊಟ್ಟು ಹೊರಗೆ ಬರುತ್ತಿದ್ದಳು.

*(ಮುಂದುವರೆಯುವುದು)*





# ಬಿಲ್ವ ಮಹಾತ್ಮೆ

**ಬಿಲ್ವವೃಕ್ಷ:** ಬಿಲ್ವವೃಕ್ಷ ಸುಮಾರು 25ರಿಂದ ಮೂವತ್ತು ಅಡಿ ಎತ್ತರಕ್ಕೆ ಬೆಳೆಯುವ ಮರ. ಇದು 3ರಿಂದ 4 ಅಡಿ ದಪ್ಪ ಇರುತ್ತದೆ. ಸುಮಾರು ಒಂದು ಅಂಗುಲ ಉದ್ದದ ಮುಳ್ಳುಗಳನ್ನು ಹೊಂದಿರುತ್ತದೆ. ಎಲೆಗಳಿಗೆ ತನ್ನದೇ ಆದ ವಾಸನೆ ಇರುತ್ತದೆ. ಇದರ ಹಣ್ಣು ಎರಡರಿಂದ ನಾಲ್ಕು ಅಂಗುಲ ದಪ್ಪವಿರುತ್ತದೆ, ಗೋಲಾಕಾರವಾಗಿರುತ್ತದೆ. ಪುಷ್ಪಗಳು ಹಹಿತಾಭಿಶ್ರೇತ, ಸುಗಂಧ ಯುಕ್ತ ಹಣ್ಣು ಇದು ಭಾರತದ ಎಲ್ಲೆಡೆಗಳಲ್ಲೂ ದೊರೆಯುತ್ತದೆ. ವಿಶೇಷವಾಗಿ ನಾಲ್ಕು ಸಾವಿರ ಅಡಿಯ ಎತ್ತರದಲ್ಲಿ ದೊರೆಯುತ್ತದೆ.

ಇದರ ಎಲೆಗಳು ವಾತಹರ ಹಾಗೂ ವೇದನಾಸ್ಥಾಪಕ. ಕಣ್ಣಿಗೆ ಎಲೆಗಳ ರಸ ಹಾಕಬಹುದು. ಕನ್ನಡ... ಬಿಲ್ವ, ಹಿಂದಿ... ಬೇಲ್, ತೆಲುಗು... ಒಮರೇಡು, ತಮಿಳು... ಬಿಲ್ವಂ, ಮಲಯಾಳಂ... ವಿಲ್ವಂ, ಬಂಗಾಳಿ... ಬೇಲ್, ಮರಾಠಿ... ಬೇಲ್.

ಶಿವೋಪಾಸಕರಿಗೆ ಬಿಲ್ವಪತ್ರೆಯು ಬಹಳ ಮಹತ್ವಪೂರ್ಣವಾದುದು. ಬಿಲ್ವಪತ್ರೆಯನ್ನು ಅರ್ಪಿಸಿ ಪೂಜೆ ಮಾಡಿದರೆ ಶಿವ ಪಾರ್ವತಿಯರಿಗೆ ಸಂತೋಷವಾಗುತ್ತದೆ. ಅದರಿಂದ ಬಿಲ್ವಪತ್ರೆಗೆ ಹೆಚ್ಚು ಮಹತ್ವವಿದೆ. ಶಿವನಿಗೆ ಏಕ ಬಿಲ್ವದಳವನ್ನು ಅರ್ಪಿಸುವುದರಿಂದ ಮೂರು ಜನ್ಮಗಳಲ್ಲಿ ಮಾಡಿದ ಪಾಪ ಪರಿಹಾರವಾಗುವುದೆಂದು ಹೇಳಲಾಗಿದೆ. ''ತ್ರಿಜನ್ಮಪಾಪ ಸಂಹಾರಂ ಏಕ ಬಿಲ್ವದಳ ಶಿವಾರ್ಪಣಂ'' ಬಿಲ್ವಪತ್ರೆಯ ಬಗೆಗೆ ಶ್ರೀ ಬ್ರಹ್ಮಚಿಂತಾಮಣಿ ತಂತ್ರದಲ್ಲಿ ಬಿಲ್ವೋಪನಿಷತ್ತಿನಲ್ಲಿ, ಮಾರ್ಕಂಡೇಯ ಸಂವಾದದಲ್ಲಿ ಮತ್ತಿತರ ಶೈವಸಾಹಿತ್ಯದಲ್ಲಿ ಹೇಳಲಾಗಿದೆ.

ಬಿಲ್ವವೃಕ್ಷವನ್ನು ಶ್ರೀವೃಕ್ಷವೆಂದೂ ಕರೆಯುವುದುಂಟು. ಇದನ್ನು ಸಂಸ್ಕೃತದಲ್ಲಿ 'ಮಾಹುರ' ಎನ್ನುತ್ತಾರೆ. ತಮಿಳಿನಲ್ಲಿ ಬಿಲ್ವಮರಂ ಎಂದೂ ತೆಲುಗು ಭಾಷೆಯಲ್ಲಿ ಮರಡು ಚೆಟ್ಟು ಬಿಲ್ವಮು ಚೆಟ್ಟು, ಮಾಲು ರಾಮುಚೆಟ್ಟು ಎಂದೂ ಕರೆಯುವುದುಂಟು. ಬಿಲ್ಪತ್ರೆ, ಬೆಲವತ್ತ, ಬೆಲ್ಲಪತ್ರೆ, ಬಿಲ್ಲಪತ್ತ, ಬೆಲ್ವತ್ತಾ ಎಂದು ಕನ್ನಡದಲ್ಲಿ ಹಲವಾರು ಹೆಸರುಗಳಿವೆ. ಭಾರತಾದ್ಯಂತ ದೊರೆಯುವ ಈ ವೃಕ್ಷಕ್ಕೆ ಆಯಾಯ ಪ್ರದೇಶ ಭಾಷೆಗಳಲ್ಲಿ ಬೇರೆ ಬೇರೆ ಹೆಸರಿನಿಂದ ಕರೆಯುತ್ತಾರೆ. ಇದು ಮುಳ್ಳುಗಳುಳ್ಳ ಮತ್ತು ಬೇಲದ ಮರದಲ್ಲಿ ಬಿಡುವ ಕಾಯಿಯಂತಹ ಕಾಯಿಗಳನ್ನು ಬಿಡುವ ಮರ. ಇದು ಬೇಸಗೆಯ ಕಾಲದಲ್ಲಿ ಹೂ ಬಿಟ್ಟು ಮಳೆಗಾಲದ ಅಂತ್ಯಕ್ಕೆ ಇದರ ಕಾಯಿಗಳು ಬಲಿತು ಹಳದಿಯ ಬಣ್ಣಕ್ಕೆ ತಿರುಗುತ್ತದೆ.

*(ಮುಂದುವರೆವುದು)*

*(ಸಂಗ್ರಹ: ಎಸ್.ಜಿ. ಕುಮಾರ್ ಆರಾಧ್ಯ, ಮೈಸೂರು*

ಭಿಕ್ಷುಕ: ಸ್ವಾಮಿ ದಯವಿಟ್ಟು ಏನಾದರೂ ದಾನ ಮಾಡಿ.

ಕಾರಿನ ಒಡೆಯ: ಮುಂದೋಗಯ್ಯ ಸಾಕು. ಚಿಲ್ಲರೆ ಇಲ್ಲ.

ಭಿಕ್ಷುಕ: ಚಿಲ್ಲರೆ ಇಲ್ಲದಿದ್ದರೆ ಪರವಾಗಿಲ್ಲ. ನನ್ನ ಮೊಬೈಲ್‌ಗೆ ಸ್ವಲ್ಪ ಟಾಕ್‌ಟೈಮ್ ಟ್ರಾನ್ಸ್‌ಫರ್ ಮಾಡಿ.

ಸೆಪ್ಟೆಂಬರ್ 2017 ತಿಂಗಳಲ್ಲಿ ನಮ್ಮ ಮಹಿಳಾ ವಿಶೇಷ ಬಳಗ ಹಾಗೂ ಸ್ನೇಹಿತರುಗಳ ಹುಟ್ಟುಹಬ್ಬದ ಪ್ರಯುಕ್ತ ಮೈಸೂರಿನ ಅಧಿದೇವತೆ ಚಾಮುಂಡೇಶ್ವರಿ ಇವರುಗಳಿಗೆ ಆಯುರಾರೋಗ್ಯ, ಐಶ್ವರ್ಯಗಳನ್ನು ಕರುಣಿಸಲಿ ಎಂದು ಕೋರುತ್ತಾ, ಪತ್ರಿಕಾ ಬಳಗವು ಶುಭವನ್ನು ಕೋರುತ್ತಿದೆ.

| | |
|---|---|
| ಸೆ. 1 ಅನುಶ್ರೀ, ಮೈಸೂರು | ಸೆ. 16 ಗಂಗಾ, ಮದ್ದೂರು |
| ಸೆ. 2 ಗೀತಾ, ಮೈಸೂರು | ಸೆ. 17 ಚಾಂದನಿ, ಮೈಸೂರು |
| ಸೆ. 3 ನಂದಿನಿ, ಮಂಡ್ಯ | ಸೆ. 18 ಕಾಂತಾಮಣಿ, ಬೆಂಗಳೂರು |
| ಸೆ. 4 ಕೋಕಿಲಾ, ಬೆಂಗಳೂರು | ಸೆ. 19 ಗಿರಿಜಾ, ಹುಬ್ಬಳ್ಳಿ |
| ಸೆ. 5 ಅಮೃತಾ, ಹಾಸನ | ಸೆ. 20 ಇಂದುಮತಿ, ಮಂಡ್ಯ |
| ಸೆ. 6 ಕುಸುಮ, ಶಿವಮೊಗ್ಗ | ಸೆ. 21 ಆಶಾದೇವಿ, ಹುಬ್ಬಳ್ಳಿ |
| ಸೆ. 7 ಶ್ರೀಗೌರಿ, ತುಮಕೂರು | ಸೆ. 22 ಜ್ಯೋತಿ, ಹಾಸನ |
| ಸೆ. 8 ರೂಪಾ, ಮೈಸೂರು | ಸೆ. 23 ಮಂಜುಳಾ, ತುಮಕೂರು |
| ಸೆ. 9 ಕಾಂಚನಾ, ಮಂಡ್ಯ | ಸೆ. 24 ದೀಪಿಕಾ, ಶಿವಮೊಗ್ಗ |
| ಸೆ. 10 ಪುಷ್ಪ, ಕೋಲಾರ | ಸೆ. 25 ಪಂಕಜಾ, ಮೈಸೂರು |
| ಸೆ. 11. ಗಜಲಕ್ಷ್ಮಿ, ಕೋಲಾರ | ಸೆ. 26 ಊರ್ಮಿಳಾ, ಬಳ್ಳಾರಿ |
| ಸೆ. 12 ಜಯಶ್ರೀ ಮಿಶ್ರಾ, ಮೈಸೂರು | ಸೆ. 27 ಕಲಾ, ಹುಣಸೂರು |
| ಸೆ. 13 ಈಶ್ವರಿ, ಹಾಸನ | ಸೆ. 28 ಚಂದ್ರಿಕಾ, ತಿಪಟೂರು |
| ಸೆ. 14 ಭಾರ್ಗವಿ, ಬೆಂಗಳೂರು | ಸೆ. 29 ಗೌತಮಿ, ಬೆಂಗಳೂರು |
| ಸೆ. 15 ಅಂಜನಾ, ಹುಬ್ಬಳ್ಳಿ | ಸೆ. 30 ಪಾರ್ವತಿ, ಬಳ್ಳಾರಿ |



ಶ್ರೀ ಅಭಯಂ ಧಾರ್ಮಿಕ ದ್ವಿಮಾಸ ಪತ್ರಿಕೆಯ ವತಿಯಿಂದ 1,001 ಗೌರಿ ಬಾಗಿನವನ್ನು ಸುಮಂಗಲಿಯರಿಗೆ ದಿ. 22-8-2017ರಂದು ಜಗನ್ಮೋಹನ ಅರಮನೆಯಲ್ಲಿ ವಿತರಿಸಲಾಯಿತು.



# ನಿಮ್ಮ ಆರೋಗ್ಯ ನಿಮ್ಮ ಕೈಯಲ್ಲೇ ಇದೆ

**ಕೃಪೆ: ಡಾ. ಕೆ. ರಾಮಚಂದ್ರ, ಮಂಡ್ಯ**

## ಮಧುಮೇಹಿಗಳ ಪಾದಗಳ ಸಂರಕ್ಷಣೆಗಾಗಿ 21 ಸೂತ್ರಗಳು

ಮಧುಮೇಹದಲ್ಲಿ ಹೆಚ್ಚಿನ ಅನಾಹುತ ಹಾಗೂ ಅತಿ ಶೀಘ್ರ ತೊಂದರೆಗೆ ಒಳಪಡುವುದು ಪಾದಗಳು. 15-20% ಮಧುಮೇಹಿಗಳು ಪಾದಗಳ ತೊಂದರೆಯಿಂದ ನರಳುತ್ತಾರೆ. ಆದುದರಿಂದ ಪಾದಗಳ ಸಂರಕ್ಷಣೆ ಪ್ರತಿಯೊಬ್ಬ ಮಧುಮೇಹಿಯ ಆದ್ಯ ಕರ್ತವ್ಯ. ಈ ಮೇಲ್ಕಂಡ ಸೂತ್ರಗಳನ್ನು ಜೀವನ ಪರ್ಯಂತ ಪಾಲಿಸಿದರೆ ಖಂಡಿತ ಎಲ್ಲಾ ಮಧುಮೇಹಿಗಳು ಪಾದಗಳ ತೊಂದರೆಯಿಂದ ವಿಮುಕ್ತರಾಗಬಹುದು.

**1. ನಿಮ್ಮ ಸಕ್ಕರೆ ಅಂಶ ಹಾಗೂ ರಕ್ತದೊತ್ತಡ ಯಾವಾಗಲೂ ನಿಯಂತ್ರಣ ದಲ್ಲಿರಲಿ**

ಹೆಚ್ಚಿನ ಮಧುಮೇಹಿಗಳಿಗೆ ಪಾದಗಳ ಸಂರಕ್ಷಣೆಗೂ ಸಕ್ಕರೆ ಅಂಶ ಹಾಗೂ ರಕ್ತದೊತ್ತಡಕ್ಕೂ ಸಂಬಂಧವೇನು ಎಂಬ ಸಂದೇಹ ಬರುತ್ತದೆ. ಮಧುಮೇಹಿಗಳ ಎಲ್ಲಾ ದುಷ್ಪರಿಣಾಮಗಳಿಗೆ ರಕ್ತದಲ್ಲಿ ಹೆಚ್ಚು ಕಾಣಿಸಿಕೊಳ್ಳುವ ಸಕ್ಕರೆ ಅಂಶವೇ ಕಾರಣ ಎಂದು ಅರಿತುಕೊಳ್ಳಬೇಕು. ದೇಹದಲ್ಲಿ ಸಕ್ಕರೆ ಅಂಶ ಹಾಗೂ ರಕ್ತದೊತ್ತಡ ಹೆಚ್ಚಿದಂತೆ ರಕ್ತನಾಳಗಳಹಾಗೂ ನರಗಳ ಮೇಲೆ ಕೆಟ್ಟ ಪರಿಣಾಮ ಬೀರಿ ಪಾದಗಳಿಗೆ ಹೆಚ್ಚು ತೊಂದರೆಯುಂಟಾಗುತ್ತದೆ. ಇದರ ಬಗ್ಗೆ ಎಲ್ಲ ಮಧುಮೇಹಿಗಳು ಹೆಚ್ಚಿನ ಕಾಳಜಿ ವಹಿಸಬೇಕು.

**2. ದಿನನಿತ್ಯ ಒಮ್ಮೆಯಾದರೂ ನಿಮ್ಮ ಪಾದಗಳನ್ನು ಕನ್ನಡಿಯಲ್ಲಿ ನೋಡಿಕೊಳ್ಳಿ**

(ಪಾದಗಳು ನಿಮ್ಮ ಮುಖದಷ್ಟೇ ಚೆನ್ನಾಗಿರಬೇಕು)

ನಮ್ಮೆಲ್ಲ ಚಟುವಟಿಕೆಗಳು ಮುಗಿದ ಮೇಲೆ ಒಮ್ಮೆ ನಿಮ್ಮ ಪಾದಗಳನ್ನು ಕನ್ನಡಿಯಲ್ಲಿ ನೋಡಿಕೊಂಡು ನನ್ನ ಪಾದಗಳಲ್ಲಿ ಯಾವುದೇ ರೀತಿಯ ತೊಂದರೆಗಳಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

**3. ನಿಮ್ಮ ಪಾದಗಳನ್ನು ದಿನನಿತ್ಯ ಶುಭ್ರವಾಗಿ ತೊಳೆಯಿರಿ ಹಾಗೂ ಯಾವುದೇ ತೊಂದರೆಯಿಲ್ಲದಂತೆ ನೋಡಿಕೊಳ್ಳಿ.**

ದಿನನಿತ್ಯ ನಿಮ್ಮ ಪಾದಗಳನ್ನು ಸಾಬೂನಿನಲ್ಲಿ (ಮೈಕೆ ಹಾಕುವ ಸಾಬೂನು) ಶುಭ್ರವಾಗಿ ತೊಳೆಯಿರಿ ಹಾಗೂ ಬೆರಳುಗಳ ಸಂದಿಗಳಲ್ಲಿ ಯಾವುದೇ ಕೊಳೆಯಿಲ್ಲದಂತೆ ಶುಭ್ರಗೊಳಿಸಿ ಹಾಗೂ ಚೆನ್ನಾಗಿ ಒರೆಸಿ ತೇವವಿಲ್ಲದಂತೆ ನೋಡಿಕೊಳ್ಳಿ.

**4. ಪಾದಗಳು ಯಾವಾಗಲೂ ಕೋಮಲ ಹಾಗೂ ಮೃದುವಾಗಿರಬೇಕು.**

ಪಾದಗಳು ಸಾಧ್ಯವಾದಷ್ಟು ಒರಟಾಗಿರಬಾರದು. ಪಾದಗಳು ಮೃದುವಾಗಿರಬೇಕು. ನಿಮ್ಮ ವೈದ್ಯರ ಸಲಹೆ ಪಡೆದು ಕೆಲವೊಂದು ಕ್ರೀಮ್‌ಗಳನ್ನು ಹಚ್ಚಿರಿ.

*(ಮುಂದುವರೆಯುವುದು)*

# The legend Sir M. Vishweshwaraya

Sir Mokshagundam Vishweshwaraya, KCIE, popularly known as Sir MV (15th September 1861-14th April 1962) was a distinguished Indian engineer, scholar, statesman and Diwan of Mysore during 1912-1918. He was a recipient of the Indian Republic's highest honour, the Bharat Ratna, in 1955. He was knighted as a commander of the British Indian Empire by King Geroge V for his myriad contributions to the public good. Every year, the 15th of September is celebrated as Engineer's Day in India in his memory. He is held in high regard as a preeminent engineer of India. He was the chief designer of the flood protection system for the city of Hyderabad, as well as the chief engineer responsible for the the construction of the Krishna Raja Sagara Dam in Mysore.

**Early Years**

Vishweshwaraya was born in 1860, near the Kingdom of Mysore, to a Telugu Brahmin family of Mokshagundam Srinivasa Sastry and Venkatalakshamma in present day Muddenahalli village, 40 miles from Bangalore. Vishweshwaraya lost his father at the age of 15. The family was in Kurnool, Andra Pradesh when this happened, and it moved back to Muddenahalli thereafter. He enrolled in a primary school in Chikballapur, and attended high school in Bangalore. He earned his Bachelor of Arts from Madras University in 1881 and later studied Civil Engineering at the Government Science College, Pune, now renamed College of Engineering, Pune.

**Career as Engineer**

Upon graduating as an engineer, Vishweshwaraya took up a job with the Public Department (PWD) of Bombay and was later invited to join the Indian Irrigation Commission. He implemented an extremely intricate system of irrigation in the Deccan area. He also designed and patented a system of automatic weir water floodgates that were first installed in 1903 at the Khadakwasla Reservoir near Pune. These gates were employed to raise the flood supply level of storage in the reservoir to the highest level likely to



be attained by a flood without causing any damage to the dam. Based on the success of these gates, the same system was installed at the Tigra Dam in Gwalior and the KRS Dam in Mandya, Mysore, Karnataka. In 1906-07, Government of India sent him to Eden [Africa] to study water supply and drainage system and the project, prepared by him was implemented in Eden successfully.

**Diwan of Mysore**

After opting for voluntary retirement in 1908, he took a foreign tour to study industrialised nations and after, for a short period he worked for Nizam of Hyderabad. He suggested flood relief measures for Hyderabad town, which was under constant threat of floods by Moosi river. Later, during November 1909, he was appointed as Chief Engineer of Mysore State. Further, during the year, 1912, he was appointed as Diwan of the primary state of Mysore. He was Diwan for 7 years.

With the support of Krishnaraja Wodeyar IV. Maharaja of Mysore, Vishweshwaraya made an unprecedented contribution as Diwan to the all round development of the state. He was instrumental in the founding of the Government Engineering College at Bangalore in 1917, one of the first Engineering Institutes in India. This institution was later named the University of Vishweshwaraya College of Engineering after its founder. It remains one of the most reputed Institutes of Engineering in Karnataka.

**Recognition**

Vishweshwaraya has received recognition in various fields, most notably the education sector and the Engineering sector. Vishweshwaraya Technological University, the University to which most Engineering Colleges in Karnataka are affiliated to, has been named in his honour. as well as prominent colleges like University Vishweshwaraya College of Engineering, Bangalore and Vishweshwaraya National Institute of Technology, Nagpur. College of Engineering, Pune his alma mater, has erected as status in his honor. The Vishweshwaraya Industrial and Technological Museum, a Museum in Bangalore is named in his honor.

*(by Ranjitha, Mysore)*

# DETAILS OF SUBSCRIPTION

*(Includes Postage, Web and Special Issues)*

**Kind Attn. to the Donors/Subscribers**

Mahila Vishesha Balaga requesting you to all those who are interested to donate or subscribe please contact and encourage to run the magazine smoothly. Please pass it on this message to your friends and others. Please oblige.

***Mahila Vishesha Balaga***

| | | |
|---|---|---|
| 2 Years Subscription | - | Rs. 301/- |
| 5 Years Subscription | - | Rs. 751/- |
| Life Membership | - | Rs. 3,001/- |
| Patron Membership | - | Rs. 10,001/- |
| Special Patron | - | Rs. 25,001/- |
| Donor | - | Rs. 1,501/- and above |

Bank Account Details
State Bank of India
Vijay Nagar 2nd Stage Branch, Mysore - 17
Current A/c - Mahila Vishesha
C.A. No. 64183295918
IFSC SBIN0040646
E-mail: mahilavishesha@yahoo.com
mahilavishesha15@gmail.com
Web: www.mahilavishesha.in

Yadavagiri Post Office, Mysore
S.B. A/c - Venkata Subbarao H.V.
No. 3098204565

Mahila Vishesha Kannada Monthly Magazine
No. 1, Seethavilasa Choultry, Narayanashastry Road
Mysore 570 024.
Ph.: 88803-34444, 93797-77793

ಕೊಟ್ಟದ್ದು ತನಗೆ, ಬಚ್ಚಿಟ್ಟಿದ್ದು ಪರರಿಗೆ
ಕೊಟ್ಟಿದ್ದು ಕೆಟ್ಟತೆನಬೇಡ, ಮುಂದೆ
ಕಟ್ಟಿಹುದು ಬುತ್ತಿ, ಸರ್ವಜ್ಞ

ಕೈಯಾರ ದಾನ ನೀಡಿದಾಗ, ಅದರ ಫಲ ದಾನಿಗೆ ದೊರೆಯುವುದು. ಹಾಗೆ ದಾನ ಮಾಡದೆ ತನ್ನಲ್ಲಿದ್ದರೂ ಅವಶ್ಯಕವಿರುವವರಿಗಾರಿಗೂ ದಾನ ಮಾಡದೆ ಬಚ್ಚಿಟ್ಟರೆ ಅದು ಒಂದಲ್ಲಾ ಒಂದು ದಿನ ಪರರ ಪಾಲಾಗದಿರದು. ದಾನ ಮಾಡಿದ ನಂತರ ಕಳೆದುಕೊಂಡೆನೇ ಎಂದು ಕಳವಳಿಸುವುದೂ ಸಹ ಸರಿಯಲ್ಲ. ಏಕೆಂದರೆ ದಾನಿಗೆ ದಾನದ ಶ್ರೇಷ್ಠ ಫಲ ಸ್ವರ್ಗದಲ್ಲಿ ಅತಿಶ್ರೇಷ್ಠವಾದ ಗಂಟಿನ ರೀತಿಯಲ್ಲಿ ಮಿಸಲಿರುತ್ತದೆ.



RNI No. KARKAN/2015/71642
KA/SK/MYS/1091/2017-2019

***Best Wishes For All Happy Dasara***

**KARNATAKA SAREE CENTRE**

955, Zoo Main Road, Ittigegud, Mysore-570 010.
Ph: 0821-2521927, 2433985
E-mail: karnatakasareecentre@gmail.com

**ANUGRAHA STITCHES**

**Smt. Veena T.R.**

No. 66, 1st Cross, 1st Stage
Siddalingeshwara Badavane
J.P. Nagar 2nd Stage, Mysuru 570 031
Tel: 89040-98940

Edited, Published and Owned by **H.V. Venkatasubbarao**, No. 1021, 14th Cross, 2nd Stage, Hebbal, Mysore-570 017 and Printed by B.C. Meera and Printed at Annapoorna Offset Printer, No. 511, 14th Main, Saraswathipuram, Mysore 570 009. Published at No. 1021, 14th Cross, 2nd Stage, Hebbal, Mysore-570 017. E-mail: mahilavishesha@yahoo.com Web: www.mahilavishesha.in Editor: **H.V. Venkatasubbarao** Mob.: 88803-34444, RNI No. KARKAN/2015/71642

ತೆರೆದ ಅಂಚೆ

To